Reg. No. B. 1270. Monday, 2nd January, 1939.

ಸಂಪುಟ ೨೧

ಕಾನಡಾವೃತ್ತ.

THE KANARA NEWS.

ಸಂಚಿಕೆ ೨೬

ಪತ್ರದ ವರ್ಗಣಿ.

ಕಮಟೆಯಲ್ಲಿ ಅಗಾವು ರೂಪಾಯಿ ೨-೪-೦.
ಮನಿಯಾರ್ಡರಿನಿಂದ ರೂ. ೩-೧-೦.
ವಿ. ಪಿ. ಅಂಚೆಪೆಟ್ಟಿ ಸೇರಿ ರೂಪಾಯಿ ೩-೪-೦.
ಪಡಿ ಸಂಚಿಕೆಗೆ ೦-೧-೦
ಹಳೇ ಸಂಚಿಕೆಗೆ ೦-೨-೦

ನರಪತಿಹಿತಕರ್ತಾ ದ್ವೇಷ್ಟತಾ ಯಾತಿ ಲೋಕೇ ಜನಪದಹಿತಕರ್ತಾ ರಾಜತಾ ಪಾರ್ಥಿವೇಂದ್ರಃ।
ಇತಿ ಮಹತಿ ವಿರೋಧೇ ವರ್ತಮಾನೇ ಸಮಾನೇ ನೃಪತಿಜನಪದಾನಾಂ ದುರ್ಲಭಃ ಕಾರ್ಯಕರ್ತಾ ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹೀರಾತುಗಳ ದರ.

ಕನ್ನಡ, ಇಂಗ್ಲಿಷ ಮಿಕ್ಕಾ ಟ್ಯಾಪಿನ (೧೫ ಎಸ್ ಉದ್ದ) ೪ ಸಾಲುಗಳವರೆಗೆ ರೂ.೧-೦-೦
ಅನಂತ್ರ ಪ್ರತಿಸಾಲಿಗೆ ೦-೨-೦.
ಕಪ್ಪಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾನ ದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವು.
ಬಾಕಿ ಜಾಹೀರಾತುಗಳ ಬಗ್ಗೆ ಪತ್ರವ್ಯವಹಾರ ಮಾಡಿ ಸಮಜಾಯಿಷಿ ಕೊಡಲ್ಪಡುವದು.

(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೨ ಮಾಹೆ ಜನವರಿ ಸನ್ ೧೯೩೯ನೇ ಇಸವಿ.)

PROBABLY WE CAN HELP.

Banks render special services of many kinds but two chief functions of a bank are to receive money on deposit from the investing public and to grant loans to businessmen and enterprises as temporary additions to their working capital. In order that the depositors' money should be safe and always available it is necessary that only safe loans should be granted. The way to ensure the saftey of a loan is to obtain from the borrower some security or as it is usually known collateral which is pledged to the bank and such loans are called secured loans. Collateral may be either gold, produce of various kinds, shares of a prosperous company, documentary trade bills, or a life insurance policy with sufficient surrender value.

We grant only secured loans. Subject to this condition the large resources of this bank and the expert services of its staff are always available to businessmen and trading concerns.

Estd· 1906.

RESOURCES OVER A CRORE·

CANARA BANK, LIMITED.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,

(ಬ್ರಿಟಿಶ ಹಿಂದುಸ್ಥಾನದಲ್ಲಿ ಸಂಘಟಿತವಾದದ್ದು)

ರಿಜಿಸ್ಟರ್ಡ ಆಫೀಸು:— "ಲಕ್ಷ್ಮೀ ನಿವಾಸ" ಬಿಲ್ಡಿಂಗ್ಸು— ಕುಂದಾಪುರ. ದ. ಕ.

ಫಿಕ್ಸೆಡ್, ಸೇವಿಂಗ್ಸ ಬೇಂಕ್, ಕರೆಂಟ್ ವಗೈರೆ ಡಿಪೋಜಿಟುಗಳು ಸ್ವೀಕರಿಸಲ್ಪಡುವವು.

ಕಾಯಂ ದೇವಣಾತಿಗಳ ಬಡ್ಡಿ ದರಗಳು- 6 ತಿಂಗಳು ಮುದ್ದತ್ತಿಗೆ 3½%, ಒಂದು ವರ್ಷದ ಮುದ್ದತ್ತಿಗೆ 4%, 2 ವರ್ಷ ಯಾ ಹೆಚ್ಚಿನ ಅವಧಿಗೆ 4½%

ಅಲ್ಪ ಮುದ್ದತ್ತಿನ ರೇವುಗಳು (Short term deposits) ಸಹ ಅಂಗೀಕರಿಸಲ್ಪಡುವವು.

ಎಲ್ಲಾ ನಿಧದ ಬೇಂಕಿಂಗ್ ವ್ಯವಹಾರಗಳು ಒಳ್ಳೇ ಸವಲತ್ತಿನಿಂದ ನಡಿಸಲ್ಪಡುವವು.

ಕುಂದಾಪುರ, 1—1—1939.

The Agricultural & Industrial Bank, Ltd.

NOTICE.

During the course of the suits in which the Society and the High School were concerned it has come to the notice of the undersigned that some persons who allege to have given subscriptions to the Society hold receipts for payment made to the previous President, the late Rao Saheb S A Nadkarni However, no list of the persons who thus became entitled to the membership of the Society, has been found nor has any such list come into the possession of the U S However, as it is found that there may be persons who are thus eligible to be members- it is decided to formulate a list of persons entitled to be members by calling forth information from the persons claiming to be so entitled Therefore all persons who may hold such receipts or other satisfactory documentary evidence for proving payments made to the previous President as contributions to the Society should present themselves in the office of the Society in the Edward High School and present their claims to the President K E E Society or the Head Master K E High School before the 25th of January 39 with the evidence as noted above The claims so presented will be duly considered and a list prepared accordingly

S. N KAMAT,
President
The King Edward Education Society, ANKOLA
ANKOLA 28th Dec 38

ಜಾಹೀರ ನೋಟೀಸು.

ದಿ ಸಾಣಿಕಟ್ಟಾ ಕೊ ಒಪರೇಟಿವ್ ಸೊಲ್ಟ ಸೇಲ ಸೊಸ್ಯಾಟಿ ಲಿಮಿಟೆಡ್, ಸಾಣಿಕಟ್ಟಾದ ಈ ಕೆಳಗಿನ ಮಾಲ್ಕಿಯ ಆಸ್ತಿಗಳನ್ನು ಮಾರುವದರ ಕಾರಣ ಈ ಆಸ್ತಿಗಳನ್ನು ಕ್ರಯಕ್ಕೆ ಕೊಳ್ಳುವರೇ ಇಚ್ಛೆಯುವರು ಸೊಸ್ಯಾಟಿಯ ಹತ್ತರ ಪತ್ರವ್ಯವಹಾರ ಮಾಡುವರೇ ವಿನಂತಿ ಯೋಗ್ಯ ಧಾರಣೆ ಬಾರಿದ್ದಲ್ಲಿ ಈ ಆಸ್ತಿಗಳನ್ನು ಇದೇ 2 4-1939ನೇ ದಿವಸ ಸೊಸ್ಯಾಟಿಯ ಆಫೀಸಿನಲ್ಲಿ (ಕುಮಟಾ ತಾಲೂಕ ಪೈಕೆ ಸಾಣಿಕಟ್ಟೆಯಲ್ಲಿ) ಜಾಹೀರ ಲಿಲಾಂ ನಿಶಿಂ ಮಾಡಲ್ಪಡುವವು ಹೆಚ್ಚಿನ ಸವಾಲು ದಾರರ ಸವಾಲು ಸೊಸ್ಯಾಟಿಯ ಮೆನೇಜಿಂಗ ಕಮಿಟಿಯಲ್ಲಿ 10—4—1939ನೇದರ ಒಳಗೆ ಕಾಯಂ ಮಾಡುವದರಲ್ಲಿ ಬರುವದು ಆಸ್ತಿಯ ವರ್ಣನೆ —

(1) ಹೊನ್ನಾವರ ತಾಲೂಕ ಹೇರಂಗಡಿ ಗ್ರಾಮದ ಆಸ್ತಿ —

ಸ ನಂಬ್ರ	ಕ್ಷೇತ್ರ	ಆಕಾರ	ಇದರಲ್ಲಿಯ ಸಮ್ಯಾಕ
279	6—33—0	37—9—0	6/7 ಅಂಶ ಮಾಲ್ಕಿ ಹಕ್ಕು

(2) ಹೊನ್ನಾವರ ತಾಲೂಕ ಸರಳಗಿ ಗ್ರಾಮದ ಆಸ್ತಿ —

ಸ ನಂಬ್ರ	ಕ್ಷೇತ್ರ	ಆಕಾರ					
19	1—21—0	7—6—0	ಖೈಕೆ	ಸಮ್ಯಾಕ	4/8	ಅಂಶ	ಮಾಲ್ಕಿ ಹಕ್ಕು
23	1—23—0	7—11—0	ಡಿ	ಡಿ	12/24	ಡಿ	ಡಿ
27	0—30—0	3—12—0	ಡಿ	ಡಿ	4/8	ಡಿ	ಡಿ
40	2—33—0	7—13—0	ಡಿ	ಡಿ	2/4	ಡಿ	ಡಿ
45	1—13—0	6—1—0	ಡಿ	ಡಿ	2/4	ಡಿ	ಡಿ
48	3—0 0	13—0—0	ಡಿ	ಡಿ	12/24	ಡಿ	ಡಿ
49	2—23—0	10—8—0	ಡಿ	ಡಿ	4/24	ಡಿ	ಡಿ
50	0—27—0	2—8—0	ಡಿ	ಡಿ	4/8	ಡಿ	ಡಿ
52 2	1—35—0	2—1—1	ಡಿ	ಡಿ	4/24	ಡಿ	ಡಿ
53	1—15—0	4—15—4	ಡಿ	ಡಿ	12/24	ಡಿ	ಡಿ
54	6—21—0	6—1—0	ಡಿ	ಪೂರಾ ಮಾಲ್ಕಿ ಹಕ್ಕು			
57	6—8—0	11—4 -0	ಡಿ	12/24 ಮಾಲ್ಕಿ ಹಕ್ಕು			
58	1—13—0	18—2—0	ಡಿ	12/24	ಡಿ	ಡಿ	
61 1	0—1—0	0—11—0	ಡಿ	12/24	ಡಿ	ಡಿ	
61-3	4—5—0	14—13—15	ಡಿ	12/24	ಡಿ	ಡಿ	

(3) ಅಂಕೋಲಾ ತಾಲೂಕ ಖೈಕೆ ಅಗರಗೋಣ ಗ್ರಾಮದ ಆಸ್ತಿಯ ವಿವರವು —

ಸ ನಂಬ್ರ	ಕ್ಷೇತ್ರ	ಆಕಾರ	
16	ಖೈಕೆ	0—6—0	0—11—6
168	ಖೈಕೆ	0—33—0	4—15—0
171		1—3—0	6—4—0
239	ಖೈಕೆ	0—8—14	1—4—0
260	ಖೈಕೆ	0—23—0	3—1—0
263		0—21—0	3—4—0

} ಇವುಗಳಲ್ಲಿಯ ಸಂಪೂರ್ಣ ಮಾಲ್ಕಿ ಹಕ್ಕು

ಈ ರೀತಿ ಕ್ರಯಕ್ಕೆ ಕೊಳ್ಳಲಿಚ್ಛೆ ಹೆಚ್ಚಿಗೆ ಮಾಹಿತಿ ಬೇಕಾದವರು ಸೊಸ್ಯಾಟಿಯ ಆಫೀಸಿಗೆ ಪತ್ರ ವ್ಯವಹಾರ ಮಾಡಬಹುದು ಯಾ ಪ್ರತ್ಯಕ್ಷ ಬಂದು ಮಾಹಿತಿಕೊಳ್ಳಬಹುದು

V. G. NADKARNY,
Secretary,
The Sanikatta Co-operative Salt Sale Society, Ltd
Post SANIKATTA

Sanikatta,
14—12—1938

ಶೀ ಷಣ್ಮುಖ ಆಯುರ್ವೇದ ಚಿಕಿತ್ಸಾಲಯ.

ಕ್ಷಯ, ಆಪಸ್ಮಾರ, ಕುಷ್ಟ, ಪ್ರಮೇಹ ಮುಖವಾತ ಇತ್ಯಾದಿ ಸಣ್ಣ ಮೊದ್ದ ಯಾವತ್ತೂ ರೋಗಗಳಿಗೆ ಔಷಧಗಳನ್ನು ಕೊಟ್ಟು ಕೇಳಿಗಮುಕ್ತರನ್ನಾಗಿ ಮಾಡುವವು ಇಪ್ಪಲ್ಲದೆ ಆಯು ರ್ವೇದೋಕ್ತ ಅನೇಕ ತೈಲ್ಯ, ತೈತ, ಲೇಹ, ಚಸ ಗುಟಿಗಳು ಮಾರಾಟಕ್ಕೂ ಸಿದ್ಧವಾಗಿರುವವು

☞ ಪ್ರತ್ಯೇಕವಾಗಿ ಅಪೇಕ್ಷೆ ಮಾಡಿದರೆ ಅಂಚೆ ಔಷಧಗಳನ್ನು ತಯಾರಿ ಮಾಡಿ ಕೊಡುವೆವು

ಮಾಲಕ - ಕೇ. ರಾಮು ಸಂಡಿತ್ತ, ಪೋ ಕುಮಟಾ ಜಿ ಉ ಕಾನಡಾ

— ಇಂದೂರ ಸಂಸ್ಥಾನದಲ್ಲಿ ಸಂಘ ಜಲಕ ಸಭೆ ಕೂಡಲಿಕ್ಕೆ ಇದ್ದ ಪ್ರತಿಬಂಧಗಳನ್ನು ಹೋಳ್ಕರ ಸರ ಕಾರವು ರದ್ದುಪಡಿಸಿದೆ ಸಂಸ್ಥಾನ ಪ್ರಜೆಗಳು ಬೇಕಾ ದಲ್ಲಿ ಸಮಜಸಿಕ ಸಭೆ ಸಾರಿಸಲು ಅಡ್ಡಿಯಿಲ್ಲವಾಗಿ ಸರಕಾರವು ಪ್ರಕಟಿಸಿದೆ ಸಂಸ್ಥಾನದ ಹೊರಗಿನ ಜನರು ಸಭೆ ಕೂಡಿಸುವದ ದರೆ ಮಾತ್ರ ಮುಂಚಿತವಾಗಿ ಪರವಾನಗಿ ಪಡೆಯಬೇಕು

ವಾರ್ತೆಗಳು.

— ಇತ್ತ ಎರಡು ವಾರು ತಿಂಗಳಿಂದ ಪ್ರಜ ಪ್ರಭುತ್ವವು ರಾಜ್ಯದಲ್ಲಿ ಸತ್ಯಾಗ್ರಹ ನಡೆದಿತ್ತಷ್ಟೇ! ಕಳದ ಸೂಮವಾರ ಅದು ಪೂರ್ಣ ಯಶಸ್ವಿಯಾಗಿ ಕೊನೆಗಂಡಿತೆಂದು ನಮಗಾದಿಸಲು ಸಂತೋಷವು ಗುತ್ತದೆ ಸತ್ಯಾಗ್ರಹ ಹೂಡಿದ ಬಗ್ಗೆ ದರಬಾರಿಗೂ ಅಂದಾಸರವರ ಮೇಲೆ ಆದ ಒಟ್ಟಿಯ ವಿಚಾರಣೆ ನಡೆದಾಗ ಅವರು ದಿಘೀರಾದ ಹೃದಯಾಂದನ್ನಿತ್ತು ಅದನ್ನು ಒಂಕೂರ ಸಾಹೆಬರಿ ಮುಟ್ಟಿಸಬೇಕಾಗಿ ಬಿನ್ನವಿಸಿದ್ದರಂತೆ ಆ ಪತ್ರಿಕೆಯ ಸಿಬ್ಬಂದಿ ಒಕೂರ ಸಾಹೆಬರ ಕರಲು ಕರಗಿತಾಗಿ ಹೇಳುತ್ತಾರೆ ನೋಮವಾರ ಮುಂಜಾನೆ ವರ್ತಮಾನಪತ್ರಿಕೆಗಳನ್ನು ನೋಡಿದಾಗ ಸತ್ಯಾಗ್ರಹವು ಕೊನೆಗೊಂಡಿದೆ ಎಂಬ ಸುದ್ದಿಯು ಕಂಡು ಬಂತು, ಪ್ರಜಾಪ್ರಭುತ್ವದ ಬಲವು ಗೆದ್ದಿತು ಎಂಬ ಸಂತೋಷದಲ್ಲಿ ಮುಳುಗಿ ಹೋದೆವು ಆದರೆ ಸಾಯಂಕಾಲ ಮತ್ತೆ ಪತ್ರಿಕೆಗಳನ್ನು ನೋಡಿದಾಗ ಸತ್ಯಾಗ್ರಹವು ಕೊನೆಗೊಂಡಿಲ್ಲವೆಂಬ ಸುದ್ದಿಯು ಕಂಡು ಬಂತು

ವರುಷ ಉಪಾಯ-ಯೋಜನೆ ಕೈಕೊಳ್ಳಬೇಕಾಗಿಯೂ ಒಂದು ನಿರ್ಣಯವಾಗಿದೆ! ಈಗಣ ಸಂಯುಕ್ತ ರಾಜ್ಯಘಟನೆಯನ್ನು ತಿರಸ್ಕರಿಸಿ ಮೆಹಾಸಭೆಯು ಅದರ ಬದಲು ಹೊಸದೊಂದು ಯೋಗ್ಯ ಘಟನೆ ಬರುವಂತೆ ಉಪಾಯಯೋಜನೆ ಮಾಡಲು ಅಧ್ಯಕ್ಷರಿಗೆ ಸರ್ವಾಧಿಕಾರವನ್ನೂ ಕೊಟ್ಟಿದೆ

— ಕಳೆದ ಸೋಮವಾರದಿಂದ ಬುಧವಾರದ ವರೆಗೆ ಮೂರು ದಿನ ಪುಣೆಯಲ್ಲಿ ಪ್ರೊ॥ ಶಿ॥ ಒಕವನಾಳರವರು ತಮ್ಮ ಅಧ್ಯಕ್ಷತೆಯ ಭಾಷಣದಲ್ಲಿ ಉದ್ಯೋಗಕ್ಕೆ ಲೆಗು, ಸ್ತ್ರೀ-ಶಿಕ್ಷಣ ಪುನರಾವೃತ್ತಿ ಶಿಕ್ಷಣ, ಸೈನಿಕ ಶಿಕ್ಷಣ, ಸಂಹಿತ್ಯ ಸಂಗ್ರಹ ವ್ಯವಹಾರ ಗ್ರಂಥಾಲಯದ ಆವಶ್ಯಕತೆ, ಸಾಹಿತ್ಯ ಸಂಸ್ಕರಣ, ಸಾಹಿತ್ಯ ಸಂಸ್ಕರಣ, ಲೇಖಕರಿಗೆ ಪದಕ ಪಾರಿತೋಷಕ-ಪ್ರಕಟಿಸುವ ಪತ್ರಗಳ ದ್ವಾರಾ ಪ್ರೋತ್ಸಾಹನೆ, ಕನ್ನಡ ಭಾಷೆಗೆ ಏಕರೂಪತೆ ಕೊಡುವ ಆವಶ್ಯಕತೆ, ಸಮಾಜದವರು ಮಾಡುತ್ತಿರುವ ಒಕ್ಕಲಿತನ ಕೈಗಾರಿಕೆ ಮತ್ತು ವ್ಯಾಪಾರ ಇವುಗಳಲ್ಲಿ ಹೊಸ ಪರಿಚ್ಛೇದಗಳಿಗೆ ತಕ್ಕಂತೆ ಸುವರ್ಣ ಮಾಡಿಕೊಳ್ಳುವ ಕರ್ತವ್ಯ, ಕರ್ನಾಟಕ ವೀಕ್ಷಣ ಮುಂತಾದ ವಿಷಯಗಳನ್ನೆತ್ತಿ ವಿವಿಧ ಮನಸೋಯ ಸೂಚನೆಗಳನ್ನು ಮಾಡಿದರು. ಮತ್ತು ಕರ್ನಾಟಕ ವಿಶ್ವವಿದ್ಯಾಲಯದ ಸ್ಥಾಪನೆಯ ಭಾರವನ್ನು ಹೆಚ್ಚಾಗಿ ವಿದ್ಯಾರ್ಥಿಗಳೇ ಹೊರಬೇಕಾಗಿ ಬೋಧಿಸಿದರು. ಮಹಾಸಭೆಯಲ್ಲಾದ ಗೊತ್ತುವಳಿಗಳಲ್ಲಿ ನಯುಕ್ತ ರಾಜ್ಯಘಟನೆಗೆ ವಿರೋಧ ರಾಷ್ಟ್ರದ ಒಂದೇ ಒಂದು ವ್ಯಾಪಿನಿಧಿಕ ಸಂಸ್ಥೆಯಾದ, ರಾಷ್ಟ್ರೀಯ ಸಭೆಯಲ್ಲಿ ವೀರಕ್ಯನರು ಕೊರಬೇಕೆಂದು ನಿರ್ಣಯ, ಶಾಂತ ಮತ್ತು ಯೋಗ್ಯ ಉಪಾಯಗಳಿಂದ ಸಂಪೂರ್ಣ ಸ್ವಾತಂತ್ರ್ಯ ಗಳಿಸುವದೇ ಮಹಾಸಭೆಯ ಗುರಿಯಿದೆ ಎಂದು ಗೊತ್ತುವಳಿಗಳು ವಿಶೇಷ ಮಹತ್ವ ದವಾಗಿರುತ್ತವೆ ಈ ಮಹಾಸಭೆಯೊಡನೆ ವೀರಶೈವ ತರುಣರ ಪರಿಷತ್ತು, ವೀರಶೈವ ಮಹಿಳಾ ಪರಿಷತ್ತು ವಗೈರೆ ಉಪಾಂಗ ಪರಿಷತ್ತುಗಳೂ ಜರುಗಿದವು

— ಕಳದ ತಾ ೨೫-೧೨-೩೭ಕ್ಕೆ ಸೂಲ್ತಾನಪುರದಲ್ಲಿ ಲೋಕನಾಯಕ ಮಾಧವರಾವ ಅಣೇ ಇವರ ಅಧ್ಯಕ್ಷತೆಯಲ್ಲಿ ಅಖಿಲ ಭಾರತ ಆರ್ಯ ಪರಿಷತ್ತು ಜರುಗಿತು. ಬೇರೆ ಬೇರೆ ಪ್ರಾಂತಗಳಿಂದ ಸಾವಿರಾರು ಆರ್ಯ ಸಮಾಜದ ಮಂದಾಳುಗಳೂ ಅನೇಯಾಯಿಗಳೂ ಈ ಪರಿಷತ್ತಿಗೆ ಒಂದಿದ್ದರು ಸ್ವಾಗತಾಧ್ಯಕ್ಷರೂ ದತ್ತಾತ್ರೇಯ ಸೂಸಾದವರೂ ಅಧ್ಯಕ್ಷರೂ ಕೈದರಾಬಾದ ಸಂಸ್ಥಾನದಲ್ಲಿ ಆರ್ಯರ ಮೇಲಾಗಿ ಹಿಂದುಗಳ ಮೇಲಾಗಿ ಆಗುತ್ತಿರುವ ಅನ್ಯಾಯ-ಅತ್ಯಾಚಾರಗಳನ್ನು ಎತ್ತಾಡಿರಿಸಿ ಒಟ್ಟಿಸಿದರು ಸಂಸ್ಥಾನದಲ್ಲಿನ್ನೂ ಪ್ರಜೆಗಳು ಹಿಂದುಗಳು ಸ್ತ್ರೀ ಮಹಲ್ಮನರು ಆದರ ಒಂದು ವರಿಷ್ಠ ಅಧಿಕಾರ ಸ್ಥಳಗಳಲ್ಲಿ ಬಿಸಿ ಮುಸಲ್ಮಾನರ ಪಾಲಿಗೆ! ಹಿಂದುಗಳಲ್ಲಿ ಸುಶಿಕ್ಷಿತರ ಪ್ರಮಾಣ ಸಾವಿರಕ್ಕೆ ಏಸಿಟು, ಮುಸಲ್ಮಾನರಲ್ಲಿ ಅದೇ ಪ್ರಮಾಣ ೧೦೫೪ ಬೀಳುತ್ತದೆ ನಿಜಾಮ ಸರಕಾರವು ತುರಂಗಗಳಲ್ಲೂ, ಶಾಲೆಗಳಲ್ಲೂ ಇನ್ನೂ ಮತ ಪುರಸ್ಕಾರಕ್ಕೆ ತುಂಬಾ ಸಹಾಯ ಮಾಡುತ್ತಿದೆ ಅದರಿಂದ ಹಿಂದುಗಳ ಧರ್ಮಿಕ ಸಭೆಗಳಾ ಧರ್ಮಿಕ ಆಂದೋಲನಗಳಿಗೂ ಪ್ರತಿಬಂಧಗಳನ್ನೊಡ್ಡಲಾಗಿದೆ! ಏನು ಶಾಲೆಗಳನ್ನು ತೆರೆದು ಹಿಂದುಗಳ ನಿರಕ್ಷರತೆಯನ್ನು ಹೋಗಲಾಡಿಸಲಿಕ್ಕೂ ನಿರ್ಬಂಧ! ಇತ್ಯಾದಿ ಅನ್ಯಾರ್ಯಗಳನ್ನು ವಿವರಿಸಿದರು ಮತ್ತು ಈಗ ಪ್ರಾರಂಭವಾಗಿರುವ ಹೈದರಾಬಾದ ಸತ್ಯಾಗ್ರಹವನ್ನು ಹಿಂದುಗಳ ನ್ಯಾಯ್ಯ ಬೇಡಿಕೆಗಳಿಗೆ ಪೂರ್ಣ ಮನ್ನಣೆ ದೊರೆಯುವ ತನಕ ನಡಿಸಬೇಕೆಂತಲೂ ಅಖಿಲ ರಾಷ್ಟ್ರದೊಳಗಿನ ಆರ್ಯರೂ ಹಿಂದುಗಳೂ ಈ ಸತ್ಯಾಗ್ರಹಕ್ಕೆ ಸಕ್ರಿಯ ಬೆಂಬಲ ಕೊಡಬೇಕೆಂತಲೂ, ಆರ್ಯ ಸಂಘ, ಹಿಂದು ಮಹಾಸಭೆ ಮತ್ತು ಸಂಸ್ಥಾನ ಕಾಂಗ್ರೆಸ ಈ ಮೂರೂ ಸಂಸ್ಥೆಗಳು ತಮ್ಮ ಶಕ್ತಿಯನ್ನು ಒಟ್ಟುಗೂಡಿಸಿ, ಸಂಯುಕ್ತ ಯುದ್ಧ ಮಂಡಳ ನೇಮಿಸಿಕೊಂಡು ಆ ಮಂಡಳದ ನೇತೃತ್ವದಲ್ಲಿ ಹೋರಾಡಬೇಕೆಂತಲೂ ಉಪದೇಶ ಮಾಡಿದರು. ಹೈದರಾಬಾದ ಸತ್ಯಾಗ್ರಹವನ್ನು ಉತ್ತಾಹದಿಂದಲೂ ಫೈರ್ಯದಿಂದಲೂ ಮುಂದರಿಸಬೇಕಾಗಿ ಪರಿಷತ್ತಿನಲ್ಲಿ ನಿರ್ಣಯವಾಯಿತು. ಮತ್ತು ಶ್ರೀ॥ ನಾರಾಯಣ ಸ್ವಾಮಿಯವರಿಗೆ ಸರ್ವಾಧಿಕಾರಿಯೆಂಬ ನೇಮಿಸಲಾಯಿತು ಶ್ರೀ॥ ನಾರಾಯಣ ಸ್ವಾಮಿಗಳವರು ಇದೀಗ ತಮ್ಮ ಬಳಿ ೩೦೦ ಸ್ವಯಂಸೇವಕರು ಸತ್ಯಾಗ್ರಹಕ್ಕೆ ಸಿದ್ಧರಿದ್ದಾರೆಂದು ಸಾರಿದರು. ಇತ್ತ ಈ ನಿರ್ಣಯವಾಗುತ್ತಿರುವಾಗಲೇ ಇತ್ತ ಹೈದರಾಬಾದ ಸಂಸ್ಥಾನದ ಕೊಂಗ್ರೆಸ ಮುಂದಾಳುಗಳು ರಾಜ್ಯಕರ್ತರೊಡನೆ ಸಂಧಾನ ಮಾಡಿತರುವ ಪ್ರಯತ್ನಗಳನ್ನು ನಡಿಸಲು ಅನುಕೂಲವಾಗುವ ಉದ್ದೇಶದಿಂದ, ಮಹಾತ್ಮಾದಿ ಕೊಂಗ್ರೆಸ ನಾಯಕರ ಸಲಹೆಯ ಮೇರೆಗೆ ಸತ್ಯಾಗ್ರಹವನ್ನು ನಿಲ್ಲಿಸಿದರು ಸತ್ಯಾಗ್ರಹವನ್ನು ಮುಂದರಿಸುವ ಕುರಿತು ಈ ಪರಿಷತ್ತಿನಲ್ಲಾದ ನಿರ್ಣಯವನ್ನು ಕೇಳಿ ಮಹಾತ್ಮರು ಲೋಕನಾಯಕ ಅಣೇಯವರಿಗೂ ಆರ್ಯ ಸಮಾಜದ ಮುಂದಾಳುಗಳಿಗೂ ವರ್ಧಾಕ್ಕೆ ಬಂದು ತಮಗೆ ಭೆಟ್ಟಿಯಾಗಲು ತಂತಿಯಿಂದ ತಿಳಿಸಿದ್ದರು. ಆದರಂತೆ ಅಣೇ ಪ್ರಭೃತಿಪ್ರಮುಖರು ವರ್ಧಾಕ್ಕೆ ಹೋಗಿದ್ದಾರೆ.

— ಅಖಿಲ ಭಾರತ ಹಿಂದೂ ಮಹಾಸಭೆಯ ೨೦ನೇ ಅಧಿವೇಶನವು ಕಳೆದ ಬುಧವಾರದಿಂದ ಶುಕ್ರವಾರದ ವರೆಗೆ ಬೆ॥ ಎನ್ನಾಯಕರುವ ಸಾವರಕರರ ಅಧ್ಯಕ್ಷತೆಯಲ್ಲಿ ನಾಗಪುರದೊಳಗೆ ಜರುಗಿತು. ಬೆ॥ ಸಾವರಕರರು ತಮ್ಮ ಅಸ್ಪೃಶ್ಯೀಯ ಭಾಷಣದಲ್ಲಿ ರಾಷ್ಟ್ರೀಯ ಸಭೆಯು ತನ್ನ ಕಾರ್ಯದಿಂದ ಪ್ರಾಂತ, ಭಾಷೆ, ಮತ, ಪಂಗಡ ಮುಂತಾದ ಭೇದ-ಭಾವನೆಗಳನ್ನು ಅಳಿದು ಹಿಂದು ಸಮಾಜದ ಸಂಘಟನೆ ಮಾಡಿ ತರಲು ಅತ್ಯಾವಶ್ಯವಾಗಿ ಮಹತ್ವದ ಸಹಾಯ ಮಾಡಿರುತ್ತದೆಂದು ಒಪ್ಪಿದರು. ಆದರೆ ರಾಷ್ಟ್ರೀಯಸಭೆಯಲ್ಲಿ ಈಗ ದೋಷಗಳು ಸೇರಿಕೊಂಡಿವೆಯೆಂತಲೂ ಅವುಗಳನ್ನು ಸುಧಾರಿಸುವವೆಗೆಸ್ಥನೆತಲೂ ಅವರ ಅಭಿಪ್ರಾಯ. ಈ ವರೆಗೆ ಮುಸಲ್ಮಾನ ಬಾಂಧವರು ಮಾತ್ರ ಅಲಿಪ್ತರಾಗಿ ಉಳಿದಿದ್ದಾರಂತೆ. ಬ್ರಿಟಿಷರೊಡನೆ ಹೋರಾಟ ನಡಿಸಿ ರಾಜಕೀಯ ಹಕ್ಕುಗಳನ್ನು ಕಸಿದುಕೊಳ್ಳಲು ಲಕ್ಷಗಟ್ಟಲೆ ಹಿಂದುಗಳು ಹೋರಾಡುತ್ತಿದ್ದಾಗ, ಸಾವಿರಾರು ಹಿಂದುಗಳು ಅಂದಮಾನ ಸೆರೆಮನೆ ಸೇರುತ್ತಿದ್ದಾಗ, ನೂರಾರು ಹಿಂದುಗಳು ಗಲ್ಲಿಗೇರುತ್ತಿದ್ದಾಗ ಮುಸಲ್ಮಾನರು ಟೇಲಿಯ ಮೇಲೆ

(೧೦ನೇ ಪಾನಿನ ಮೇಲಿ ಮುಂದುಸಿದೆ)

ಅಪೂರ್ವ ಸಂಧಿ! ಅನುಚಿನಿಕರಿಂದ ಕೆಲಸ!! ಸವಲತ್ತಿನ ದರಗಳು!!!

ಕಾರವಾರ ಜಿಲ್ಲೆ ಎಲ್ಲಿ ಅಪೂರ್ವ ಸಾಹಸ!

ದಿ ಪ್ರಭಾಕರ ಇಲೆಕ್ಟ್ರೋಪ್ಲೇಟಿಂಗ ವರ್ಕ್ಸ,



ಹೈಸ್ಕೂಲ ರೋಡ,

ಕುಮಟಾ.

ನಮ್ಮ ಜಿಲ್ಲೆಯಲ್ಲಿ ಪ್ರಥಮ ವರ್ಷ ನೂತನ ಸ್ಥಾಪಕಲುಗಳು ತುಕ್ಕು ಹಿಡಿದು ನಿಷ್ಪಯೋಜಕವಾಗಿ ಹಾಳಾಗುತ್ತಿರುವದನ್ನು ಕಂಡು ಇದೀಗಲೇ ಶಾಸ್ತ್ರೀಯ ರೀತ್ಯಾ ಅಧುನಿಕ ಪದ್ಧತಿಯಂತೆ ಇಲೆಕ್ಟ್ರಿಕ್ ಕರಂಟಿನಿಂದ ಹಳೇ ಸ್ಯಾಕಲುಗಳನ್ನು ಹೊಸ ಸ್ಯಾಕಲುಗಳಾಗಿ ರೂಪಾಂತರಿಸಿ ಕೊಡುವ ಕೆಲಸವನ್ನು ನಾವು ಗ್ಯಾರಂಟಿಯಿಂದ ಮಾಡಿಕೊಡುತ್ತೇವೆ.

ಸ್ಪೇನು, ಫೂರ್ಕ, ಮಡಿಗಾಡುಗಳಿಗೆ ಸ್ಪ್ರೇ ಕಲರ ಯಾನೆ ಕಪ್ಪು ಬಣ್ಣಗಳಿಂದಲೂ, ಇತರ ಭಾಗಗಳಿಗೆ ನಿಕ್ಕಲ್ ಪ್ಲೇಟಿಂಗಿನಿಂದಲೂ ಸಿಟಿಂಗ ಮಾಡಿಕೊಡಬಲಾಗುವದು

ಇದಲ್ಲವೆ ಎಲ್ಲ ತರದ ಕಬ್ಬಿಣ, ಹಿತ್ತಾಳೆ, ತಾಮ್ರ ಇನೇ ಮೊದಲಾದ ಲೋಹದ ಸಾಮಾನುಗಳಿಗೂ, ಪಾತ್ರೆಗಳಿಗೂ ನಮ್ಮ ನಾವು ನಿಕ್ಕಲ್ ಮತ್ತು ಸಿಲ್ವರ್ ಪ್ಲೇಟಿಂಗ ಮಾಡಿಕೊಡುತ್ತೇವೆ

ಪ್ರತಿ ಸ್ಯಾಕಲಿಗೆ ಚಾರ್ಜು ರೂ ೮—೦—೦.

ನಿಷ್ಪಯೋಜಕ ಸಾಮಾನಿನ ಚಾರ್ಜು ಪ್ರತ್ಯೇಕ ಕೊಡಬೇಕಾಗುವದು

ಒನ್ಮೆ ಅನುಭವ ಪಡೆದಲ್ಲಿ ತಾನೇ ಖಾತ್ರಿಯಾಗುವುದು

ಇಂದೇ ಬರೆಯರಿ, ಯಾ ಪೆಟ್ಟಿಯಾಗಿ ತಿಳಿದುಕೊಳ್ಳರಿ

ಪತ್ರ:— ಡಿ ಆರ್. ನಾಯ್ಕ, ಪ್ರೊಪ್ರೈಟರ್,

ದಿ ಪ್ರಭಾಕರ ಇಲೆಕ್ಟ್ರೋಪ್ಲೇಟಿಂಗ ವರ್ಕ್ಸ,

ಹೈಸ್ಕೂಲ ರೋಡ, ಕುಮಟಾ. (ಉ ಕನ್ನಡ)

ಳ್ಳಾರಿಯ ಕನ್ನಡ ಸಾಹಿತ್ಯ ಸಮ್ಮೇಲನ
(೬ನೇ ಪಾನಾಂದ ಮುಂದರಿಪ್ಪು)

ವಿಮರ್ಶಕರು.

ಲೇಖಕ-ವಾಚಕರ ನಡುವೆ ವಿಮರ್ಶಕರ ವರ್ಗ ಶಾಂದಿವೆ. ಸಾಹಿತ್ಯದ ಒಳಿತು, ಕೆಡಕುಗಳನ್ನು ದಾರ್ಷ್ಟ್ಯೆಣ್ಯದಿಂದ ತೋರಿಸುವ ವಿಮರ್ಶಕ ವೃತ್ತಿ ನಮ್ಮಲ್ಲಿ ಇನ್ನೂ "ಅಷ್ಟೊಂದು ವಿಕಸಿತವಾಗಿಲ್ಲ ಅಹೋ ರೂಪಮಹೋ ಧ್ವನಿಃ" ಯಂಥ ವಿಮರ್ಶೆ ಮಾಡುವವರೇ ಹೆಚ್ಚಾಗಿ ಕಂಡುಬರುತ್ತಾರೆ ವಿಮರ್ಶಕರು ದಾಕ್ಷಿಣ್ಯರಹಿತರಾಗಬೇಕು ವಿಮರ್ಶಗಳಿ ಪುಸ್ತಕಗಳನ್ನು ಕೊಂಡುಕೊಂಡಾದರೂ ನಿರ್ದಾಕ್ಷಿಣ್ಯದಿಂದ ವಿಮರ್ಶೆ ಮಾಡುವವರು ಮುಂದೆ ಬರಬೇಕು. ಯಾವುದೊಂದು ಪುಸ್ತಕದ ಧ್ಯೇಯನೇನು, ಅದೆಷ್ಟು ಸಾಧಿಸಿದೆ, ಲೇಖಕನ ಯೋಗ್ಯತೆಯೇನು, ವಿಷಯ ಪ್ರತಿಪಾದನೆ ಹೇಗಿದೆ, ಇತ್ಯಾದಿ ವಿಷಯಗಳನ್ನು ಸತ್ಯಪಕ್ಷಪಾತಿಗಳಾಗಿ, ಪಠಾಜದ ಹಿತ-ದೃಷ್ಟಿಯಿಂದ ವಿಮರ್ಶಿಸುವ ವಿಮರ್ಶಕರು ಬೇಕು. ಸಾಹಿತ್ಯ ಸೃಷ್ಟಿಯಲ್ಲಿ ವಿಮರ್ಶಕನ ಸ್ಥಾನ ಬಹು ಮಹತ್ವದ್ದಿದೆ.

ಈ ವರೆಗೆ ಜನಸಾಮಾನ್ಯರಿಗೆ ಹೊಳೆಯದಿತ್ತ ಕಾಲಲ್ಲು ಮನಸಿಗನ್ನು ನಿನ್ನೆಯರಿಗೆ ಇಟ್ಟಿದ್ದೇನೆ ಮಿನೆಗೆ ನಾಲ್ಕು ಸೂಚನೆಗಳನ್ನು ಕೊಟ್ಟು ವಿದಾಯ ತಿವೆನು ಜನಸಾಮಾನ್ಯರ ನುಡಿಗೆ ನಾವು ಅತ್ಯಂತ ಮಹತ್ವಕೊಡಬೇಕು ದೇಹದಜೀವಕ್ಕೆ ಉಸಿರುಂಡಷ್ಟಂತೆ ಜಿಮ್ಮ ಜೀವನಕ್ಕೆ ನುಡಿ ಯಾರ ನುಡಿಗೆ ಎಷ್ಟು ಮಹತ್ವ ಕೊಡಬೇಕೆಂದೆ. ಸಮಸ್ಯಸ್ಥಿಯಿಂದ ಏರ್ಪಡಿಸಿ ಅವರಂತೆ ನಡೆದಿದೆ, ನುಡಿಗಳ ತಾಕಲಾಟ ಕುವಿಮೆ.ಯಾಗಬಾರದು ಈ ವಿಷಯದಲ್ಲಿ ಪ್ರಾಂತಿಕ ಭಾಷೆಗೇ ಪ್ರಾಧಾನ್ಯವೆಂದು ತಳಿಯುವದವಶ್ಯ ಉಚಿತವಾದ ಸುಂದರ ರೂಪ ಧರಿಸಿದೆ ನುಡಿಯೇ ಸಾಹಿತ್ಯವೆನಿಸುತ್ತದೆ ನಿಲಕ್ಷಣ ರಾಜಕೀಯ, ಸಾಮಾಜಿಕ ಪರಿಸ್ಥಿತಿಯ ಮೂಲಕ ಕನ್ನಡನಡಿಯಾಗಿ ಸಾಹಿತ್ಯಗಳ ಬೇವಸಗೆಗೆ ಅನೇಕ ಅಡಚಣೆಗಳುಂಟಾಗಿವೆ. ಆದರೆ ನಾವು ಅಭಿಮಾನಶೂನ್ಯತೆ ಮತ್ತು ಜಡ್ಡು ಇವನ್ನು ಬಿಟ್ಟು ಸಗಿದರೆ ನಮ್ಮ ಸಾಹಿತ್ಯ ಇತರ ಸಾಹಿತ್ಯಗಳಷ್ಟೇ ಮುಂದುವರಿಯಬಹುದು. ಆಗಾದ ಪ್ರಗತಿಯಿಂದ ನಾವು ಸಂತುಷ್ಟರಾಗಕೂಡದು ಉಚ್ಚ ಧ್ಯೇಯ ಮುಂದಿಟ್ಟು ಅದನ್ನು ಮುಟ್ಟಲು ನಾವು ಹವಣಿಸಬೇಕು ಲೇಖಕರೂ, ವಾಚಕರೂ, ವಿಮರ್ಶಕರೂ ಉಚ್ಚ ಧ್ಯೇಯನಿಗಳಿಂದ ಪ್ರೇರಿತರಾಗಬೇಕು. ಅಂದರೆ ಸಮಾಜದ ಲಾಭವಾಗುವದು. ಸದ್ಯದಲ್ಲಿ ನಾವು ಕೈಕೊಳ್ಳಬೇಕಾದ ಕಾರ್ಯಕ್ರಮದ ಕುರಿತು ಕೆಲವು ಸೂಚನೆಗಳನ್ನು ಮಾಡಬಯಸುತ್ತೇನೆ

ಸೂಚನೆಗಳು.

ಕರ್ನಾಟಕ ಪ್ರಾಂತೀಕರಣದ ಗೊತ್ತುವಳಿ ಸ್ವೀಕರಿಸಿದ ಮುಂಬಯಿ, ಮದ್ರಾಸ ಸರಕಾರದವರನ್ನು ನಾವು ಅಭಿನಂದಿಸಬೇಕು ಸಾಹಿತ್ಯ ಪರಿಷತ್ತಿನ ಉದ್ದೇಶ-ಮಾಲಿಕೆ ಪರಿಪೂರ್ಣವಿದೆ. ಆ ಉದ್ದೇಶಗಳನ್ನು ಹಲವನ್ನಾದರೂ ಸಾಧಿಸಲು ನಾವು ಯತ್ನಿಸಬೇಕು. ಆತ್ಯಜ್ಜ ಕನ್ನಡ ಸಾಹಿತ್ಯ ನಿರ್ಮಾಣವಾಗಬೇಕೆಂದು ಬಯಸುವಾಗಲೇ ನಾವು ಕರ್ನಾಟಕದಲ್ಲಿ ಪ್ರತಿಯೊಬ್ಬನಿಗೂ ಓದು-ಬರಹ ಬರುವಂತೆ ಪ್ರಯತ್ನಿಸಲು ಪ್ರಯತ್ನಿಸಬೇಕು. ಪ್ರಯತ್ನ ಮಾಡಿ ಸರಕಾರದವರು ಈ ಕೆಲಸ ಕೈಕೊಳ್ಳುವಂತೆ ಮಾಡಬೇಕು. ಬರೀ ನಾಲ್ಕು ಒಳ್ಳೇ ಕಾವ್ಯಗಳಿಂದ ನವ್ಯ ಉದ್ಧಾರವಾಗದು. ಜನಸಾಮಾನ್ಯರಿಗೆ ನುಡಿಯ ಜ್ಞಾನವಾದಾಗಲೇ ಪುನರ್ವಸ್ಥಿಕ ಸಾಹಿತ್ಯವೆಂದಿರಿ ಕಬ್ಬಿಲು ಆದ್ಯವಿರುವದು. ಅಖಿಲ ಕನ್ನಡ ಪುಸ್ತಕ ಮತ್ತು ಪತ್ರಿಕೆಗಳು ಸಿಗುವ ವ್ಯವಸ್ಥೆಯಾಗಬೇಕು ಅವಶ್ಯವಿದೆ ವೈಷಾಣ ವಿಶ್ವವಿದ್ಯಾಲಯದಂತೆ ಈ ಪ್ರಯತ್ನ ಸಾರ್ವಜನಿಕ ವಿಶ್ವವಿದ್ಯಾಲಯದ ವಿಸ್ತಾರ ಅಖಿಲ ಕರ್ನಾಟಕ ವಿಶ್ವವಿದ್ಯಾಲಯವನ್ನಾಗಿ ಮಾಡಲು ತಿರುಗಿ ಪ್ರಯತ್ನ ಮಾಡಬೇಕು. ಈಗಿದ್ದ ವಿಶ್ವವಿದ್ಯಾಲಯಗಳಲ್ಲಿ ಕನ್ನಡಕ್ಕೆ ಯೋಗ್ಯ ಸ್ಥಾನ ದೊರಕಿಸಬೇಕು ಧಾರವಾಡದಲ್ಲಿ ಕೂಡಿದ ಕರ್ನಾಟಕ ವಿದ್ವಜ್ಜನ ಪರಿಷತ್ತು ನೇಮಿಸಿದ ಮಂತ್ರಿಯನ್ನು ನಾವು ಪೂರ್ಣ ಸಹಾಯ ಮಾಡಬೇಕು. ಕರ್ನಾಟಕ ಗಡಿನಾಡುಗಳ ಸಮಸ್ಯೆ ಬಿಡಿಸಲು ದೊಡ್ಡ ಉಪನ್ಯಾಸಗಳ ಉಪಯೋಗವಿಲ್ಲ ಉತ್ಸಾಹಿ ತರುಣ ಕನ್ನಡಿಗರಿಗೆ ಕಳಿಸಿ ಅಲ್ಲಿ ನಾವು ಶಾಲೆಗಳನ್ನೂ ವಾಚನಾಲಯಗಳನ್ನೂ ತೆರೆಯುವದು.ತ್ಯಮ. ಕನ್ನಡ ನೊಳಲಿಗಳ ಜೋಡಣೆಯಲ್ಲಿ ಸುಧಾರಣೆ ಮಾಡುವ ಕುರಿತು ಅನೇಕ ಸೂಚನೆಗಳು ಮುಂದೆ ಬಂದಿವೆ ಪತ್ರಿಕೆಗಳು ಅವನ್ನು ಸ್ವೀಕರಿಸಬೇಕು. ಕನ್ನಡ ಲಘು ಲಿಪಿ ಮತ್ತು ಟೈಪುರೈಟರ ತಯಾರಿಸುವ ಕಡೆಗೆ ನಾವು ಗಮನಿಸಬೇಕು. ಗ್ರಾಮೋಫೋನ್, ರೇಡಿಯೋ, ಸಿನೆಮಾ ಮುಂತಾದ ಕ್ಷೇತ್ರಗಳಲ್ಲಿ ಕನ್ನಡದ ಹಕ್ಕು-ಬಾದ್ಯತೆಗಳಿಗೆ ಯೋಗ್ಯ ಮನ್ನಣೆ ದೊರಕಿಸಬೇಕು

ಸಹೋದರ ಸಹೋದರಿಯರೇ ನನ್ನ ಅಪ್ಪು-ತಪ್ಪು ಮಾತುಗಳನ್ನು ನೀವು ಶಾಂತ ರೀತಿಯಿಂದ ಕೇಳಿ ಕೊಂಡಿರಿ. ಇನ್ನು ಸಮ್ಮೇಲನದ ಕಾರ್ಯಕ್ರಮೆತೆಗಡಿಗಿ, ಸಭೆಯಲ್ಲಾಗುವತೀರ್ಮಾನಗಳಂತೆ ನಡೆಯುವಪರ್ಯಾಲೋಚನೆ ಮಾಡೋಣ. ಕನ್ನಡ ತಾಯಿಯ ಸೇವಕರಾಗಿ ಅದರ ಬೆಳವಣಿಗೆಗೆ ಸಹಾಯ ಮಾಡೋಣ. ಅದರ ಬೆಳಕ್ಕು ಬೀರುವಂತೆ, ಕೀರ್ತಿ ದಿಗಂತವಾಗುವಂತೆ ಪ್ರಯತ್ನಿಸೋಣ!

— ಆಲಿಸೀನಿಯಾದಲ್ಲಿ ಪೂರ್ವಗಡಿಯಲ್ಲಿರುವ ಫ್ರೆಂಚ್ ಸೋಮಾಲಿಲೆಂಡದಲ್ಲಿ ಇತಾಲಿಯವರಿಗೂ ಫ್ರೆಂಚರಿಗೂ ಯುದ್ಧಸ್ಫೋಟವಾಗುವ ಲಕ್ಷಣಗಳು ಕಾಣುತ್ತಿವೆ.

ಅಬ್ಬಬ್ಬಾ! ಏನು ತಲೆ ನಡತೆ, ಏನು ಜಾಡ್ಯ, ಕೆಟ್ಟೆ!
ಡಾಕ್ಟರರ ಮೋಜು ಸಹ ಇಷ್ಟೆಲ !!
ಮಾತ್ರೆ, ಲೋಕಮಾನ್ಯ ಹೆಮ್ಮಳಮುಸುವ
ಬಿಡರಬೇಡ! ಜ.ಹ.ಪ ಸಾಕು!!!
ನನು ಉಪಯೋಗ! ಜೀವಕ್ಕೆ ಹಿತಕರ ರೋಗ ಪ್ರತಿಬಂಧಕ,
ತುಪ್ಪಿ ಪುಪ್ಪಿ ಕ್ಷುದಾ ಶಾಂತಿಯ್ಯೀಯುವದೇ ಈ ನಾಮಾಂಕಿತ ಚತುರ ಮಾತ್ರೆಗಣ! ಜ್ವಾಸಕಾಸ, ಉಬ್ಬಸ, ಕೆಮ್ಮು ಇತ್ಯಾದಿಗಳ ತತ್ಕಾಲ ಶಮನ! ಕೊಡ ಅಂತು ಸಾಫ!
ಬರೇ ೧೫ ದಿವಸಗಳ ಪ್ರಯೋಗ! ಇನ್ನ ತೊಡಲ್ಲಿ ಅಧಿ ವೃದ್ಧಿ !" ಅತೀ ರಿತಿ ಮುಂದರಿಸು ವಿನ್ನ ಲುಸ್ಟ್ ಪಿಲ್ಲೇಜ್ ರಾಯ ವೈದ್ಯವಾಗಿ ಸರ್ವತ್ರವಿಸುವದು ಇದು ಪೇಟೆಂಟ್ ಸೋಪು ಇಕ್ಕಿರ ಸರ್ಟಿಫಿಕೇಟುಗಳ ತತ್ಕಾಲಿಕ ನೋಡು ಇಕ್ಕಿ ಇಷ್ಟ ಬರೇ 0—10—0.
ಬಿಕ್ಕಿಪ್ಪದ್ದಲ್ಲಿ ಸಿಗುವ ಒಂದೇ ಸ್ಥಳ -
ದಿನ್ಯಾ ಸಪ್ಲ್ಯಾ ಏಜನ್ಸಿ, ಳುಮಟಾ.

MAINTAIN THE DEPTH OF YOUR RESOURCES

Experience tells us that deep rivers become shallow by accumulation of sand and periodical dredging is required to maintain their depth. Likewise the resources of many a family grow shallow by accumulation of debts These debts, however, if cleared periodically the depth of the resources can be maintained. Consult us and we shall explain to you the various ways of clearing such debts to lead a planned life and maintain the depth of the family resources

THE CANARA INDUSTRIAL & BANKING SYNDICATE LTD.,

Estd.:] (INCORPORATED IN BRITISH INDIA) [1925.

Head Office: "MUKUND NIVAS", UDIPI, S. INDIA

MEMBER.

RESERVE BANK OF INDIA, BANKERS' CLEARING HOUSE BOMBAY.

Authorised Capital	Rs 10,00,000	Issued Capital	Rs 8,00,000
Subscribed Capital	Rs 7,74,500	Paid-up Capital	Rs 3,86,880.
Reserves		Rs 2,16,790.	

Banking Business of every description transacted.

ಬಳ್ಳಾರಿಯ ಕನ್ನಡ ಸಾಹಿತ್ಯ ಸಮ್ಮೇಲನ.

ಅಧ್ಯಕ್ಷ ಶ್ರೀ॥ ದಿವಾಕರರವರ ಮನನೀಯ ಸೂಚನೆಗಳು.

ಸೊಂದೂರ ಸಂಸ್ಥಾನಾಧಿಪರ ಕನ್ನಡ ಪ್ರೇಮ

ಕರ್ನಾಟಕ ಸಾಹಿತ್ಯ ಸಮ್ಮೇಲನದ ಮಾನೆ ಅಧಿವೇಶನವು ಕಳೆದ ಗುರುವಾರ ತಾ ೨೯ನೇಗೆ ವಂಜಾನೆ ಬಳ್ಳಾರಿಯಲ್ಲಿ ಸುಪ್ರಸಿದ್ಧ ಕನ್ನಡ ಲೇಖಕರೂ ಕೊಂಗ್ರೆಸ ಸೇವಕರೂ ಆದ ಶ್ರೀ। ದಿವಾಕರ ರಂಗನಾಥಯ್ಯರ ಅಧ್ಯಕ್ಷತೆಯಲ್ಲಿ ಸಂಕಿತ ಆದ್ಯರ್ಯ ಅಂಮೆ ಮಂಜಾನೆ ಬಳ್ಳಾರಿಗೆ ತಲ್ಪಿದರು ಅವರಿಗೆ ಪ್ರಚಂಡ ಸ್ವಾಗತವಾಯಿತು ೮ ಘಂಟೆಗೆ ಪ್ರವಾಸಿಗರ ಬಂಗ್ಲೆಯಿಂದ ಅಧ್ಯಕ್ಷರ ವೈಬವದ ಮೆರವಣಿಗೆ ಹೊರಟಿತು ಸೊಂತೂರಿನ ರಾಜೋಪಾಧ್ಯೇಬರು ಅಸನ ಯ ಮೇಲೆ ಅಂಬಾರಿಯಲ್ಲಿ ಕುಳಿತಿದ್ದರು ಅಧ್ಯಕ್ಷರ ರದಕ್ಕೆ ೨೮ ಎತ್ತುಗಳನ್ನು ಹೂಡಿದ್ದರು ಮೆರವಣಿಗೆಯ., ಕರ್ನಾಟಕ ಮಾತೆಯ ಜಯ-ಜಯಕಾರ ಮಾಡುತ್ತ ಲಕ್ಷಿ ಘಂಟೆಗ ಚಿನ್ನಬಸವೇಶ್ವರ ಭವನಕ್ಕೆ ಮುಟ್ಟಿತು ಸ್ವಾಗತಾಧ್ಯಕ್ಷರಾದ ಪಂ। ನಾಗೇಶಶಾಸ್ತ್ರಿಗಳು ಅಧ್ಯಕ್ಷರಿಗೂ ರಾಜೋಪಾಧೇಬರಿಗೂ ಸ್ವಾಗತ ಸಿದರು ಕೂಡಲೆ ಸಮ್ಮೇಲನಕ್ಕಾರಂಬವಾಯಿತು ಸ್ವಾಗತಾಧ್ಯಕ್ಷರು ಅಧ್ಯಕ್ಷರಿಗೂ ಪ್ರತಿನಿಧಿಗಳಿಗೂ ಸ್ವಾಗತ ಬಯಸಿ, ಕನ್ನಡಿಗರ ಐಕ್ಯ-ಸಂಘಟನೆಗಳ ಅವಶ್ಯಕತೆಯನ್ನು ಒತ್ತಿ ಹೇಳಿದರು ಆಮೇಲೆ ಸಮ್ಮೇಲನದ ಉದ್ಘಾಟನೆ ಮಾಡುತ್ತ ಸೊಂತೂರಿನ ೨೬ನೇ ಸಾಮಂತ ಯಶವಂತರಾವ ಮೋರಪಡೆಯವರು ಲಲಿತ ಸುಂದರ ಕನ್ನಡ ಭಾಷೆಯಲ್ಲಿ ಮಾತಾಡಿ, ಹಿಂದ ಸ್ವಾತಂತ್ರಪೂರ್ವ ಕಾಲದಲ್ಲಿ ಒಂದೇ ಲಿಪಿಯ ಪ್ರಚಾರ ಮಾಡುವದವಶ್ಯವಿರುತ್ತೆಂತ ಪ್ರತಿಪಾದಿಸಿದರು ಮತ್ತು ಕನ್ನಡಿಗರೆಲ್ಲರೂ ಫೈದಾವ ಮರೆತು ಕೆಲಸ ಮಾಡಬೇಕೆಂದು ಬೋಧಿಸಿದರು ಆಮೇಲೆ ಶ್ರೀ। ಮುದವೀಡು ಕೃಷ್ಣರಾವ ಪ್ರಭೃತಿ ಹಿರಿಯ-ಕಿರಿಯ ಸಾಹಿತಿಗಳು ಶ್ರೀ। ದಿವಾಕರರ ಗುಣ ಗೌರವಗಳ ವರ್ಣನೆ ಮಾಡಿ ಅವರಿಗೆ, ಅಧ್ಯಕ್ಷಸ್ಥಾನ ಸ್ವೀಕರಿಸಲು ಬಿನ್ನವಿಸಿದರು ಅದಂತೆ ಶ್ರೀ। ದಿವಾಕರರು ಅಧ್ಯಕ್ಷಪೀಠವನ್ನೇರಿ ಒಳ್ಳೆ ಉದ್ದೇಗ್ಭಕ ಭಾಷಣ ಮಾಡಿದರು ಆದರ ಸಾರಾಂಶ ಈ ಕೆಳಗಿನಂತೆ ನನಗೆ ಅಧ್ಯಕ್ಷಪದವನ್ನಿತ್ತ ಒಗ್ಗ ತಮಗ ಚಿರಿನಂದನಗಳು ಈ ದೊಡ್ಡ ಪದವಿ ನನಗಿಗೆ ನೀವು ಕೊಟ್ಟಾದು ನನ್ನ ಮೇಲಿನ ನಿಮ್ಮ ಅಕ್ಕರೆಯ ಮೂಲಕವೆಂದು ನಾನು ಒಪ್ಪುನು ಭಾರತದ ಸ್ವತಂತ್ರ್ಯ-ಸಂಗ್ರಾಮದಲ್ಲಿ ಹೋರಾಡಿ ಶ್ರಮವಹಿಸಿ ಒಡ ಒಂಟು, ವಿಶ್ರಾಂತಿಯ ಕಾಲದಲ್ಲಿ ಕನ್ನಡ ನಾಡಿಯ ಸೇವೆ ಮಾಡುವ ತೆತ್ತಿಗ ಈ ಅಲ್ಪ ಸೇವೆಗಾಗಿ ನೀವು ಈ ಬಹುಮಾನ ಕೊಟ್ಟಿದ್ದು ನಿಮ್ಮ ಔದಾರ್ಯದ ದ್ಯೋತಕ, ನನ್ನ ಹಿರಿಮೆಯನ್ನಲ್ಲ ಸಾಹಿತ್ಯ ಸಾಮ್ರಾಜ್ಯದ ಒಳಗಲ್ಲಿ ಸಣ್ಣವರಿಗೂ ಎರಯಿದೆಯೆಂದು ನೀವು ತೋರಿಸಿರುವಿರಿ ನನ್ನನ್ನು ಸಂತಿಯಿಲ್ಲ ನನ್ನ ಜೀವನಾನುಭವಗಳನ್ನು ಹರಕ ಮುರಕ ಭಾಷಣ ಲ್ಲಿ ಒರಿದಿರುವ ನಪ್ಪೆಗೆ ಆಸ್ಪದಿಂದ ನನು ನಂಹಿಯಗಳಂರೆ ಅದರಿನ ನೆರಬ್ಬ ಕನ್ನಡ ಸ್ನೇಮಿ, ಕರ್ನಾಟಕದ ಅಡಿಯಾಳು ಇನ್ನೇ ಒಂಡಲು ಇದ್ದರೆ ಈ ಅಧ್ಯಕ್ಷ ಪಟ್ಟವೇರಲು ಸಾಕೆಂದು ನೀವು ಒಪ್ಪಿದಂತಾಗಿದೆ ಈ ಸಮ್ಮೇಲನದ ಉದ್ಘಾಟನೆ ಮಾಡಲು ಸೊಂದೂರ ಅರಸರು ಒಪ್ಪಿ ೪ ಕಾರ್ಯ ನಿರ್ವಹಿಸಿದ್ದು ಸುದೈವ ಹೋದ ವರ್ಷ ಜಮಖಂಡಿ ಸಂಸ್ಥಾನಾಧೀಶರು ನನಗೆ ದೊರಿಸಿಂದಲೇ ಆಶ್ರಯವಾದ ಮೆಲ್ಲಿದ್ದರು' ಮೈಸೂರ ಮಹಾರಾಜರನ್ನು ಬಿಟ್ಟರೆ ಈ ವರೆಗೆ ಕನ್ನಡ ಪ್ರಜೆಗಳನ್ನಾಳಿದ ಯಾವ ಅರಸರೂ ಕನ್ನಡದ ಕಡೆಗೆ ಕಣ್ಣೆತ್ತಿ ನೋಡಿರುವದಿಲ್ಲ ಈಗ ಪ್ರಜೆಗಳ ನುಡಿಗೆ ಮನ್ನಣೆ ಕೊಡುವ ಕರ್ತವ್ಯ ರಾಜರಿಗೆ ಹೊಳೆಯಲಾರಂಭಿಸಿದುದು ಒಳ್ಳೆ ಶುಬಲಕ್ಷಣ ಬಳ್ಳಾರಿಯು ಕರ್ನಾಟಕದ ಹಿಂದಿನ ಸಾಮ್ರಾಜ್ಯದ ತವರೂರು ಈ ಜಿಲ್ಲೆಯಲ್ಲಿ ಆಡ್ತಾಡುವಾಗ ನಮ್ಮ ಅಂತಃಕರಣದಲ್ಲಿ ಅಲ್ಲೋಲ ಕಲ್ಲೋಲವುಂಟಾಗುತ್ತದೆ ಹಿಂದಿನ ಇತಿಹಾಸದಲ್ಲಿ ಮುಂದೆ ಬಂದು ನಿಲ್ಲುತ್ತಿರಿ ಹಿಂದಿನ ವೀರಂತೆ ನಾವು ದೊಡ್ಡವರಂ ಗಬಹುದಲ್ಲವೆ ಎಂಬಲಿಲ್ಲಿಂ ಗುತ್ತಿದೆ ನಿಷ್ಕಾರಣವಲ್ಲ ಸ್ವಾತಂತ್ರ್ಯ ಸ್ಫೂರ್ತಿ, ಹುಕ್ಕ ಬುಕ್ಕರ ರಣೋತ್ಸಾಹ, ಸಾಯಣ್ಣ ಮಂತ್ರಿ ಪ್ರಾಂಡಿತ್ಯ, ಕೃಷ್ಣದೇವರಾಯರ ದಿಗ್ವಿಜಯ, ವ್ಯವಸಾಯರ ಜೀವಜಕ್ತಿ, ರಾಮಾಮಾತ್ಯರ ಲಲಿತಕಲಾ-ನೈಪುಣ್ಯ ಇವುಗಳ ನೆನಪು ಮಾಡಿಕೊಟ್ಟು ಕನ್ನಡ ನರನಾರಿಯರು ಬೀಡಾದ ಹಾಗೂ ಮೈಮರೆ ಪುರುಷರ ತಪೋಭೂಮಿಯಾದ ಬಳ್ಳಾರಿಯು ನಮ್ಮಲ್ಲಿ ನವಚೈತನ್ಯ ಬೀರುತ್ತಿದೆ' ಇತರ ಜಿಲ್ಲೆಯ ಜನರಿಗೆ ಕರ್ನಾಟಕದ ಪೂರ್ಣ ಭೂಮಿಯ ದರ್ಶನ ಆಗುವಂತೆ ಈ ಸಮ್ಮೇಲನವು ಏರ್ಪಾಡಾಗಿರುವದಕ್ಕಾಗಿ ಸಂತೋಷ ವ್ಯಕ್ತಪಡಿಸಿದರು ಆಮೇಲೆ ಸಾಹಿತ್ಯ ಸಮ್ಮೇಲನಗಳ ಉದ್ದೇಶ ಮತ್ತು ಕಾರ್ಯಗಳ ಬಗ್ಗೆ ಸವಿಸ್ತಾರವಾಗಿ ವಿವೇಚಿಸಿದರು ಸಾಹಿತ್ಯ ಸಮ್ಮೇಲನಗಳು ಕೇವಲ ಸಾಹಿತ್ಯಾಸಕ್ತರ ಸಂಘಗಳಾಗಿರದೆ ಜನಸಾಮಾನ್ಯರ ಸಂಘಗಳಾಗಬೇಕು ಎಂದು ಹೇಳಿದರು ಸಾಹಿತ್ಯ ಸಮ್ಮೇಲನಗಳು ಜನಸಾಮಾನ್ಯರ ಸಂಘಗಳಾಗಬೇಕಾದರೆ ಅವು ಜನಸಾಮಾನ್ಯರ ಭಾಷೆಯಲ್ಲಿ ನಡೆಯಬೇಕು ಎಂದು ಹೇಳಿದರು ಸಾಹಿತ್ಯ ಸಮ್ಮೇಲನಗಳು ಜನಸಾಮಾನ್ಯರ ಸಂಘಗಳಾಗಬೇಕಾದರೆ ಅವು ಜನಸಾಮಾನ್ಯರ ಭಾಷೆಯಲ್ಲಿ ನಡೆಯಬೇಕು ಎಲ್ಲ ಭಾಷೆಗಳಿಗೆ ಆ ನಿಯಮ ಹೇಗೆ ಅನ್ವಯಿಸಬೇಕು ಅದನ್ನು ಹೇಗೆ ಅಮಲಿನಲ್ಲಿ ತರಬೇಕು ಇವು ಬಹು ಕಠಿಣ ಸಮಸ್ಯೆಗಳು ಅವುಗಳ ಒಗ್ಗ ತುರು ವಿಚಾರ ಮಾಡೋಣ

ಈಗ ನಾಡಿಗಳ ತಾತಲಾಟ ಹೇಗೆ ಉಂಟಾಯಿತೆಂಬುದನ್ನು ನೋಡಿದರೆ ಅದನ್ನು ತಪ್ಪಿಸುವ ಹಾದಿ ಬೇಗ ಹೊಳೆಯುವಂತಿದೆ ಪ್ರತಿಯೊಬ್ಬ ಭಾರತೀಯನಿಗೆ ಸಾಮಾನ್ಯವಾಗಿ ಐರು ನುಡಿಗಳ ಸಂಬಂಧ ಬರಬಹುದು (೧) ತಾಯ್ನುಡಿ ಅಥವಾ ಮನೆ-ಮಾತು, (೨) ಪ್ರಾಂತಿಕ ಭಾಷೆ, (೩) ರಾಷ್ಟ್ರ ಭಾಷೆ, (೪) ಉಚ್ಚ ಶಿಕ್ಷಣದ ಇಂಗ್ಲೀಶ ಭಾಷೆ, (೫) ನನ್ನ ಪೂರ್ವಜರ ಸಂಸ್ಕೃತ ಭಾಷೆ ಇವುಗಳ ಸಂಬಂಧ ಹೇಗೆ ಇಟ್ಟುಕೊಳ್ಳಬೇಕೆಂಬುದೇ ಮುಖ್ಯ ಪ್ರಶ್ನೆ ಇದೇ ನಮ್ಮ ಭಾಷಾ-ಸಮಸ್ಯೆ ನಮ್ಮ ಜನರು ವಿಕಮತವಿಲ್ಲದೆ ಬೇಕಾದ ಭಾಷೆಗೆ ಹೆಚ್ಚು-ಕಡಿಮೆ ಮಹತ್ವ ಕೊಡುವದರಿಂದ ನಾಡಿಗಳ ತಾತಲಾಟದ ಪ್ರಶ್ನೆ ಎದ್ದಿದೆ

ನಾನು ಪ್ರಾಂತ-ಭಾಷೆಗೆ ಹೆಚ್ಚು ಮಹತ್ವ ಕೊಡುವೆನು ಆಯಾ ಪ್ರಾಂತಗಳಲ್ಲಿ ಆಯಾ ಪ್ರಾಂತದ ಭಾಷೆಗೆ ಮುಖ್ಯಸ್ಥಾನವಿರಬೇಕು ಶಾಲೆ-ಕೊಲೆಜುಗಳ ಹಾಗೂ ಕೋರ್ಟ-ಕಚೇರಿಗಳ ಭಾಷೆ ಪ್ರಾಂತ್ಯನಿಷ್ಠವಾದ ಭಾಷೆ ಸರ್ವಜನಿಕ ವ್ಯವಹಾರಗಳ ಭಾಷೆ ಅದೇ ಇರಬೇಕು. ಆಯಾ ಪ್ರಾಂತದಲ್ಲಿ ಸಾರ್ವಜನಿಕ ಹಣ ಇತರ ಭಾಷೆಗಳ ಅಭಿವೃದ್ಧಿಗಾಗಿ ಪೆಚ್ಚು ಮಾಡುವದು ಸರಿಯಲ್ಲ. ಹದಕ್ಕೊಂದು ಅಪವಾದವಿದೆ ಯಾವಜೊಂದು ವಿಶಿಷ್ಟ ಭಾಗದಲ್ಲಿ ಬೇರೊಂದು ಭಾಷೆಯರು ಸಾಕಷ್ಟು ಇದ್ದರೆ ಅವರಿಗೆ ನಾಲ್ಕು ವರ್ಷ ಪ್ರಾಥಮಿಕ ಶಿಕ್ಷಣ ಅವರ ಮಕ್ಕ ಮಾತೃಭಾಷೆಲ್ಲ ಕೊಡಬೇಕು ಅವರಿಗೂ ಪ್ರಾಂತಿಕ ಭಾಷೆ ಕಲಿಸಬೇಕು ಯಾವ ಜನರೆ ನಡಿ ' ನಾವು ಜೀವನ ಸಾಗಿಸಬೇಕೋ ಅವರೊಡನೆ ಏಕ ವಾಗಲು ಪ್ರಾಂತಿಕ ಭಾಷೆ ದೊಡ್ಡ ಸಾಧನವಾದ್ದರಿಂದಲೇ ಅನಕ್ಕೆ ನಾನು ಮಹತ್ವ ಕೊಡುತ್ತೀನ ನನ್ನ ಅಭಿಮಾನ ಪ್ರಾಂತಿಕರಬೇಕು ನಾಡಿನ ಜನರೊಡನೆ ವಿಕರಸವಾಗುವದು ನಮ್ಮ ಕರ್ತವ್ಯ ತಾಯ್ನುಡಿಯನ್ನು ಕಯ್ಬಿಡಬೇಕಾದ ದು ಸ್ವಾಭಾವಿಕ ಆದರೆ ಸಾಧಾರಣ ಭಾಷೆಗೆ ನಾವು ಆತಂಕ ತರಕೂಡದು ಪ್ರಾಂತಿಕ ಭಾಷೆಗೆ ಬಾಧೆ ಬರದಂತೆ ಆಯಾ ಪ್ರಾಂತದ ಅಲ್ಪಸಂಖ್ಯಾ ಭಾಷೆಗಳಿಗೆ ಸ್ಥಾನವಿರಬೇಕು ವೈವಯರಿಕ ಹಿಂದುಸ್ತಾನಿಯು ಸರ್ವಸಾಮಾನ್ಯವಾಗಿ ಕಿಲಿಯಬೇಕ ಅಂತರರಾಷ್ಟ್ರೀಯವ್ಯವಹಾರಕ್ಕಾಗಿ ಹಾಗು ವಿಜ್ಞಾನ ಶಾಸ್ತ್ರಾಭ್ಯಾಸಕ್ಕಾಗಿ ಇಂಗ್ಲಿಸಭಾಷೆ ಮಾಧ್ಯಮವಾಗಿಡಬೇಕು ಪೂರ್ವ ಸಂಸ್ಕೃತಿಯ ಹಾಗೂ ಭಾಷಾ ಶ್ರದ್ಧೆಯ ಅಭ್ಯಾಸ ಮಾಡಲಿಚ್ಛಿಸುವವರು ಸಂಸ್ಕೃತ ಕಲಿಯಬೇಕು ಇದೇ ನನ್ನ ಅಭಿಪ್ರಾಯ

ನಾಡಿ, ಭಾಷೆ, ಶಿಕ್ಷಣ ಇವು ಹಸಿ ಸರಕು ಅವುಗಳಿಕಲು ಕೈತ ಸಾಹಿತ್ಯ ಕಲ್ಲು ಕಟ್ಟದು ಒಪ್ಪುಗೂಟ್ಟುರಿ ಮೂರ್ತಿಯಾಗುತ್ತದೆ ಪಟ್ಟಕ್ಕೆ ಬಣ್ಣ ಕೊಟ್ಟರೆ ಚಿತ್ರವಾಗುತ್ತದೆ ಅದೇ ರೀತಿ ಅರ್ಥವತ್ತಾದ ಶಬ್ದಗಳನ್ನು ರಸ ಹುಟ್ಟುವಂತೆ ಕೂಡಿಸಿದರೆ ಸಾಹಿತ್ಯ ನಿರ್ಮಾಣವಾಗುತ್ತದೆ ಆದ

ಕನ್ನಡ ಮಾತನಾಡುವ ೧೨೦ ಲಕ್ಷಕ್ಕೂ ಹೆಚ್ಚಿದ್ದಾಗ್ಯೂ ಇದೇನು ಸಣ್ಣ ಸಂಖ್ಯೆಯಲ್ಲ. ಕನ್ನಡ ದೇಶದ ವ್ಯಾಪ್ತಿಯಾವಾಗಲೂ ಸಣ್ಣದಿಲ್ಲ. ದಕ್ಷಿಣದಲ್ಲಿ ನೀಲಗಿರಿ ಜಿಲ್ಲೆಯಿಂದ ಉತ್ತರಕ್ಕೆ ಬೀದರ ಜಿಲ್ಲೆಯ ತನಕ, ಪಶ್ಚಿಮಕ್ಕೆ ದಕ್ಷಿಣೋತ್ತರ ಜಿಲ್ಲೆಗಳಿಂದ ಪೂರ್ವಕ್ಕೆ ರಾಯಚೂರ, ಬಳ್ಳಾರಿತನಕ ಕನ್ನಡ ನಾಡು ಹಬ್ಬಿದೆ.

ನಮ್ಮ ನುಡಿ, ಸಾಹಿತ್ಯಗಳ ಪರಿಸ್ಥಿತಿ ವಿಲಕ್ಷಣವಾಗಿದೆ ಉತ್ತರ ಕರ್ನಾಟಕದ ಪರಿಸ್ಥಿತಿಯನ್ನೇ ನಾನು ಇಲ್ಲಿ ಕನ್ನಡವು ಮರಣಶಯ್ಯೆಯಿಂದ ಎದ್ದು ಪಾಂಗಿ ಗಂಡುಮಿಂಡಿರಿಂದ ನಿಂತಿದೆ ಎಂದಲು ಇಲ್ಲಿ ಕನ್ನಡ ಶಾಲೆಗಳಿರಲಿಲ್ಲ ಬೆಳಗ ಮಿಯ ಕನ್ನಡ ಜಿಲ್ಲೆಯೆಂದು ಸಿದ್ಧಪಡಿಸಲು ಇತಿಹಾಸ ಹೇಳಬೇಕಾಯಿತು ಧಾರವಾಡ ಸಭೆಗಳಲ್ಲಿ ಕನ್ನಡ ಮಾತಾಡಬೇಕೆಂದು ಸಿದ್ಧಪಡಿಸುವದು ಶತಕೃತ್ಯವಾಗಿತ್ತು ಕನ್ನಡಕ್ಕೇನು ಘಾಸಿಯೇ, ಸಾಹಿತ್ಯನೇ, ಸಂಗೀತವೇ ಎಂದು ಕೇಳುವ ಕನ್ನಡಿಗರು ಇನ್ನೂ ಇದ್ದಾರೆ ನಮ್ಮ ಮಾತು ಕನ್ನಡ ಎಂದು ಹೇಳಲಿಕ್ಕೆ ನಾಚುವವರೂ ಇದ್ದಾರೆ ಮೊನ್ನೆ ನಾನು ಪುಣೆಯ ಒಂದು ಶಾಲೆಯೊಳಗಿನ ಕರ್ನಾಟಕ ಸಂಘಕ್ಕೆ ಹೋಗಿದ್ದೆನು ತಾವು ಕನ್ನಡಿಗರೆಂದು ಕೇಳಲು ನಾಚುವವರು ಗರು ಆಳ್ವಿನವರೆಗೆ ನಾಚುತ್ತಾರೆ. ಕರ್ನಾಟಕದ ರಾಜಕೀಯ-ವಿಶೇಷವಾಗಿ ದಕ್ಷಿಣೋತ್ತರ ಕನ್ನಡ ಜಿಲ್ಲೆಯವರು ನೆರೆ ಪ್ರಾಂತಗಳಿಗೆ ಹೋಗಿ ಬರುವರು ಅವರ ಕನ್ನಡಕ್ಕೆ ತಿಲಾಂಜಲಿ ಕೊಟ್ಟೇ ಹೋಗಿ ಬರುತ್ತಾರೆ ಇದು ಕನ್ನಡದ ಹಾನಿಯೇ ಕಬ್ಬಿಣದ್ದು ಇಲ್ಲಿ ಬಂದು ನೆಲೆಸಿದ ಮಂದಿಗರು, ತೆಲುಗರು, ಗುಜರಾತಿಗಳು ತಮ್ಮ ಭಾಷೆ ಬಿಡದೆ ತಮ್ಮ ಹಕ್ಕು ಹೇಳುತ್ತಾರೆ ಮಾರವಾರಿಗರು ಒಲು ಗಟ್ಟಿಗರು, ಮನೆ-ಮಾತು ಎಂದೂ ಬಿಡುವದಿಲ್ಲ. ಕನ್ನಡಿಗರು ನೆರೆ-ಪ್ರಾಂತಗಳಲ್ಲಿ ನೆಲೆಸುವದಾದರೆ ಅವರು ಕನ್ನಡ ಬೇಕಾದ ಹಾಗೆ ಮರೆಯಲಿ ಆದರೆ ಅವರು ತಿರುಗಿ ಒರುವರಾದರೆ, ಬರವ ಇಚ್ಛೆಯುಳ್ಳವರಾದರೆ ತಮ್ಮ ಕನ್ನಡ ಉಳಿಸಿಕೊಳ್ಳಬೇಕು ಆದೇ ರೀತಿಗೆ ಕರ್ನಾಟಕದಲ್ಲಿ ನೆಲೆಸಿದ ವ್ಯಾಪಾರಿಗರೂ ತೆಲುಗರೂ ಕನ್ನಡ ಕಲಿತು ಜನರೊಡನೆ ಸಮರಸರಾಗಬೇಕು. ಇದು ನೆರೆ ಪ್ರಾಂತಗಳ ಪರಸ್ಪರ ಧರ್ಮ ನಮ್ಮ ನೆರೆ ಪ್ರಾಂತವರು ಮೊದಲೇ ಜಾಗ್ರತರಾಗಿ, ನಮ್ಮ ನುಡಿಗಳನ್ನು ಎಷ್ಟೋ ಸುಧಾರಿಸಿದ್ದಾರೆ. ಅವರು ಹೆಚ್ಚು ಪ್ರಚಾರ ಪಿಲಿಂದಿದ್ದಾರೆ ಆದ್ದರಿಂದ ನಾವು ನಮ್ಮ ನುಡಿಯ ವರ್ಚಸ್ಸು ನಡಿಯ ವಂತೆ ಎಚ್ಚರಗೊಳ್ಳಬೇಕು. ಈ ಕಾಲದಲ್ಲಿ ಪ್ರೂನೋ ರೇಡಿಯೋ, ಸಿನೆಮಾ, ವೃತ್ತ ಪತ್ರಗಳು ನುಡಿಯ ಪ್ರಚಾರಕ್ಕೆ ಸಹಾಯಕವಾಗಿವೆ ಕನ್ನಡವು ಈ ವೃವಸಾಯಗಳಲ್ಲಿ ಬಹಳ ಹಿಂದಿದೆ ಮುಂಬಯಿ ರೇಡಿಯೋ ಸ್ಟೇಶನಿನಲ್ಲಿ ಕನ್ನಡಕ್ಕೆ ಸ್ಥಾನ ದೊರೆತಿಲ್ಲ ಕನ್ನಡ ವಾಕ್ಚಿತ್ರಗಳು, ಕನ್ನಡವ ಕೃಷಿ ತಯಾರಾಗುವ ಕಂಪನಿಗಳ ಸಂಖ್ಯೆ ಕಂಡರೆ ನಿರಾಶೆಯಾಗುತ್ತದೆ ಇವನ್ನು ದುರ್ಲಕ್ಷಿಸಕೂಡದು.

ನಾಡಿನ ಒಂತೆ ಸಾಹಿತ್ಯದ ಸ್ಥಿತಿಯೂ ವಿಲಕ್ಷಣವಾಗಿದೆ ೧೨೦ ಲಕ್ಷ ಕನ್ನಡಿಗರದ್ದಾರೆಯೇ ನಿಜ ಆದರೆ ಭಿನ್ನ ಭಿನ್ನ ಅಡಳತೆಗಳಿಗೆ ಒಳಗಾದ್ದರಿಂದ ನಮ್ಮಲ್ಲಿ ಭಾಷಾ ಭೇದಗಳಾಗಿವೆ ಒಂದು ಭಾಗದಲ್ಲಿ ರಚಿಸಿದ ಪುಸ್ತಕ ಇನ್ನೊಂದೆಡೆ ಸಂಯೋಗವದಿಲ್ಲ ಮಾಧ್ಯಮ, ಕ ಹಾಗೂ ಉಚ್ಚ ಶಿಕ್ಷಣಕ್ರಮದಲ್ಲಿ ಕನ್ನಡಕ್ಕೆ ಯೋಗ್ಯ ಸ್ಥಾನ ದೊರೆತಿಲ್ಲ ಹೀಗಾದ್ದರಿಂದ ಉತ್ತಮ ಕನ್ನಡ ಪುಸ್ತಕಗಳು ಹೊರಡುವುದಾರವು ಯಾವನೊಬ್ಬ ಲೇಖಕನು ತನ್ನ ಪುಸ್ತಕ ಪರ್ಯ-ಪುಸ್ತಕ ಕರ್ತಾಗುವಂತೆ ಪ್ರಯತ್ನಗೊಂಡು ತಿರುಗಾಡಬೇಕು, ಇಲ್ಲವೆ ಪಾಠೋತ್ತೇಜಕ ದೊರಯುವವೆನೆಂದು ಸಂಸ್ಥೆಗಳ ಕಾಲು ಹಿಡಿಯಬೇಕು ಯಾವ ಪುಸ್ತಕವನ್ನು ನೋಡಿರಿ ಪ್ರಥಮ ಸಂಸ್ಕರಣದಗಿಂತ ಹೆಚ್ಚು ಪ್ರತಿಗಳು ಹೊರಡುವದಿಲ್ಲ ಎರಡನೇ ಸಂಸ್ಕರಣದ ಪುಣ್ಯಯೋಗ ದೊರಕಿ ಪುಸ್ತಕಗಳು ತೀರ ವಿರಳ ನಮ್ಮಲ್ಲಿ ಸಾಹಿತ್ಯ-ಜೀವಿಗಳು ಎಸ್ಟೆಂಬುದನ್ನು ನೋಡಿದರೆ ಬಹಳ ಬೋಧನಾಗುತ್ತದೆ ವರ್ಷಾನುವರ್ಷ ಹುಟ್ಟಿದ ಕನ್ನಡ ಪುಸ್ತಕಗಳ ಲೆಕ್ಕ ಮಾಡಲಿಕ್ಕೂ ಸಾಧಗಲಲ್ಲ ಆದ್ದರಿಂದ ಎಲ್ಲ ಕನ್ನಡ ಸಾಹಿತ್ಯ ಕಲೆ ಹ ಕುವ ಒಂದು ಮಧ್ಯವರ್ತಿ ಪುಸ್ತಕಾಲಯ ಅವಶ್ಯವಿದೆ ಆಧಿ ವಾರ್ಷಿಕ ಪರಿಶೀಲನೆ ಮಾಡಲು ಅನುಕೂಲವಾಗುವದು ಪುಸ್ತಕಗಳ ಕಂಪ್ಲಿ ಬಿಡಿರಿ ಪ್ರತಿವರ್ಷ ಹೊರಬೀಳುವ ಪುಸ್ತಕಗಳ ವಿಷಯಗಳನ್ನು ನೋಡಿದರೂ ನಾವು ಬಹಳ ಹಿಂದೆ ಇದ್ದೇವೆಂದು ಹೇಳಬೇಕು. ಬಗೆದ ಪುಸ್ತಕಗಳಲ್ಲಿ ಮೂ ಶಿಷ್ಟ್ಯ, ಭಾಷಾಂತರಗಳೆಷ್ಟು, ವಾಙ್ಮಯ ಚೌರ್ಯಗಳೆಷ್ಟು, ನೆರೆ ಪ್ರಾಂತಗಳ ಭಿ ಪೆಗಲ್ಲಿ ಭಾಷಾಂತರ ಹೊಂದಿದ ನೆಪ್ಪು ಎಂಬುದನ್ನ ಪರಿಶೀಲಿಸಿದರೆ, ನಮ್ಮ ಸಾಹಿತ್ಯ ದ ಯೋಗ್ಯತೆ ತಿಳಿಯ ವದು ಅಂಧ ಶಾಂಧ ನಾವಿರ ಪುಸ್ತಕಗಳಿಗಂತ ನಿಜ ರಸ್ಪೋದಕ ಒಂದೇ ಪುಸ್ತಕವು ಪುಷ್ಕಂಚನ್ನು ಕಲಿದೂಗಿಸಬಹುದು ಹಾಗೂ ನನ್ನು ಸಾಹಿತ್ಯಕ್ಕೆ ಎಷ್ಟೆಷ್ಟ ಮನ್ನಣೆ ದೊರಕಿಸ ಬಹುದು. ರವೀಂದ್ರನಂಥಾ ಗೀತಾಂಜಲಿಯಂತ ಒಂಗಾಲಿಯು ಆತ್ಯುಚ್ಚ ಶಿಖರಕ್ಕೆ ಮುಟ್ಟಿದೆ ಅಂಥ ಪುಸ್ತಕಗಳು ನಮ್ಮಲ್ಲಿ ಇವೆಯೇ? ಎಂದು ನಾವು ನಿರೀಕ್ಷಿಸಬೇಕು

ವೃತ್ತಪತ್ರಗಳು ಹೆಜ್ಜೆ ಭಾಷಾಸೇವೆಯಾತಬಲ್ಲವು ಆದರೆ ಕನ್ನಡದಲ್ಲಿ ಅವುಗಳ ಪ್ರಸಾರ ಕಡಿಮೆ ಪ್ರಸಾರಕ್ಕೆ ಅಡಚಣೆಗಳೂ ಬಹಳ ಜನರಲ್ಲಿ ನವ ವಿಚಾರಗಳನ್ನು ಬೀರುವ ಸಮರ್ಥ ದೈನಿಕ ಒಂದೂ ಇಲ್ಲ ಇದ್ದ ದೈನಿಕಗಳು ಪುಟ್ಟಿಗಳನ್ನೆತ್ತಿ ಕೊಡುತ್ತಿವೆ ಪತ್ರಿಕೆಗಳು ನಿತ್ಯವೂ ಹೊಸ ವಿಚಾರಗಳನ್ನ ಪ್ರಕಟಿಸಬೇಕಾದ್ದರಿಂದ ಆವು ಹೊಸ ಹೊಸ ಶಬ್ದಗಳನ್ನು ನಿರ್ಮಿಸಿ ಸಾಹಿತ್ಯ ಸೇವೆ ಮಾಡುತ್ತಿವೆ ಸಾಹಿತ್ಯ ಸಮಾಲೋಚನೆಯ ಕಲಸ ವಾರ-ಪತ್ರಿಕೆಗಳೂ ಮಾಸ-ಪತ್ರಿಕೆಗಳೂ ಮಾಡಬಲ್ಲವು ಸದ್ಯಕ್ಕೆ ಈ ಕೆಲಸ ಬುದ್ಧಿವಂತಿಕೆಯಿಂದ ಸಾಗಿಲ್ಲವೆಂದು ಹೇಳಬೇಕಾಗಿದೆ

ಇಷ್ಟೆಲ್ಲ ಅಡಚಣೆಗಳಿದ್ದರೂ ಕನ್ನಡ ಬದುಕಿ ಬೆಳೆಯುತ್ತಿದೆ, ಕನ್ನಡಿಗರ ಸಂಖ್ಯೆ ಬೆಳೆಯುತ್ತಲಿದೆ, ದೈನಿಕ ಪತ್ರಗಳು ಹೆಚ್ಚು ಪ್ರಸಾರ ಹೊಂದುತ್ತಿವೆ ನೆರೆ-ಪ್ರಾಂತದ ಪತ್ರಿಗಳನ್ನು ಗುಣದಲ್ಲಿಯಾದರೂ ಅವು ಸರಿಗಟ್ಟುತ್ತಿವೆ ಸಾಪ್ತಾಹಿಕಗಳೂ ಲೋಕ ಪ್ರಿಯವಾಗಹತ್ತಿವೆ ಅಲ್ಲಲ್ಲಿ ಕನ್ನಡಿಗರ ಸಂಘಗಳು ಕನ್ನಡ ನುಡಿಯ ಬಾವುಟವನ್ನು ಎತ್ತಿ ಹಿಡಿದಿವೆ ಕಲೆ-ಕಾವಿಂಬರಿಗಳು ಹುಟ್ಟಿಚ್ಚು ಮುದ್ದಾಗಿ ಹೊರ ಡುತ್ತಿವೆ. ಕವಿಗಳು ಹೊಸ ವಿಚಾರಗಳನ್ನೂ ಹೊಸ ಶೈಲಿಗಳನ್ನೂ ಮುಂಡಿಟ್ಟು ಮೆಚ್ಚುಗೆ ಪಡೆಯುತ್ತಿದ್ದಾರೆ ಅಭಿಮಾನಿ ಕನ್ನಡಿಗರು ಕನ್ನಡದ ಹಕ್ಕಗಳಿಗಾಗಿ ಕಾದ ಡುತ್ತಿದ್ದಾರೆ

ಲೇಖಕರ ವೃತ್ತಿ.

ಸಾಹಿತ್ಯವೆಂಬುವದು ಲೇಖಕರ ಹಾಗೂ ವಾಚಕರ ನಡುವಿನ ಕೊಡು-ಕೊಳ್ಳುವ ವಸ್ತು. ಲೇಖಕರು ವಿವಿಧ ರೂಪಗಳ ಸಾಹಿತ್ಯ ಕೊಡುತ್ತಾರೆ. ವಾಚಕರು ಅವರಿಗೆ ಹಣವನ್ನಾಗಲಿ ಪ್ರಶಂಸೆಯನ್ನಾಗಲಿ ಕೊಟ್ಟು ಋಣಮುಕ್ತರಾಗುತ್ತಾರೆ ಇವರಿಬ್ಬರ ವ್ಯವಹಾರ-ವೃತ್ತಿ ಏನಾರಬೇಕೆಂದು ಅಲೋಚಿಸುವದು ಮಹತ್ವದ್ದ ಪದ್ಯಕ್ಕೆ ಲೇಖಕ-ವಾಚಕರ ವೃತ್ತಿ ನೋಡಿ ವಿಷಾದವಾಗುತ್ತದೆ ಅಲ್ಲಿಂದಿಲ್ಲಿಂದ ಎಜಕರ ಗಳನ್ನೂ ಬೈಲಿಗಳನ್ನೂ ಕಳವು ಮಾಡಿ, ತಿದ್ದಿ ತೀಡಿ ಬರೆದು ಪತ್ರಿಕೆಗಳಿಗೆ ಕಳಿಸಿ, ಅದು ಮಹದಿನ ಪತ್ರಿಕೆಗಳಲ್ಲಿ ಬಾರದೆ ಹೋದರೆ ಸಂಪಾದಕರಿಗೆ ಬೈಯ್ಯುವ ಕವಿಗಳೂ ಲೇಖಕರೂ ಅನೇಕರಿದ್ದಾರೆ. ಸಾಹಿತ್ಯ ಸೇವೆಯೆಂದು ಒಂದು ಪುಸ್ತಕವನ್ನೋ ಪತ್ರಿಕೆಯನ್ನೋ ತಕ್ಕೊಂಡು, ನಿಮಗೆ ಕನ್ನಡದ ಅಭಿಮಾನವಿದ್ದರೆ ನೀವು ಕೊಳ್ಳಲಿಕ್ಕೇ ಬೇಕೆಂದು ಕೊರೆಗೆ ಕಟ್ಟುವವರೂ ಇದ್ದಾರೆ ಇವರಿಗೆ ನನ್ನ ಪ್ರಾಥ-ನೆಯಿಷ್ಟೇ. ನೀವು ಪೇಟೆಗೆ ಹೋಗುವ ಮೊದಲು ಪೇಟೆಯಲ್ಲಿ ಮಾರಾತ್ಕೃಂತದೇನಾದರೂ ತಮ್ಮಲ್ಲುಂಟೆ? ಎಂದು ಅಂಗಡಿಗಳಲ್ಲಿ ವಿಚಾರಿಸಿದಂತೆ ಮಾಡಿರಿ ಕೇವಲ ಅಭಿಮಾನದಿಂದ ಕೊಳ್ಳುವ ದಿನಗಳು ಈಗಿಲ್ಲ ಪತ್ರಿಕಾ ಕರ್ತಾರಿಗೆ ಬೇರೆ ಲೆಖಕರಿದ್ದಾರೆ, ಲೇಖಗಳವೆ ನಿಮ್ಮ ಲೇಖದ ಹಾಡಿಯನ್ನೇ ಅವನು ಕಾಯುವದಿಲ್ಲ ನಾವು ನಮ್ಮ ಯೋಗ್ಯತೆ ಬೆಳಸಬೇಕು ಒಂದಿನ ಸಾಹಿತಿಗಳು ವೃತ್ತಪತ್ರಗಳಲ್ಲಿ ತಮ್ಮ ಹೆಸರು ಬರಬೇಕೆಂದು ಹವಣಿಸಲಿಲ್ಲ ಎನ್ನೋ ಜನರ ಹೆಸರು ನಮಗಿನ್ನೂ ಗೊತ್ತಿಲ್ಲ ಏನಾದರೂ ಬರೆದುಕೊಂಡು ಪತ್ರಿಕೆಗಳ ಕಚೇರಿಗೆ ಎಡತಾಕುವದರಲ್ಲಿ ಗೌರವವಿಲ್ಲ ಉತ್ಕೃಷ್ಟ ಲೇಖಕರು ತಿದ್ದಿ ತಿದ್ದಿ, ಎಷ್ಟೋ ಹರಿದೊಗೆದು ಬರೆಯುತ್ತಾರೆಂಬುದನ್ನು ನಾವು ಲಕ್ಷದಲ್ಲಿಡಬೇಕು ಲೋಕಪ್ರಿಯರಾಗಲು ಬೇಕಾದಷ್ಟನ್ನು ಒರೆಯುವ ಲೇಖಕರು ಹಲವರಿದ್ದಾರೆ ಈ ವೃತ್ತಿ ಇನ್ನವಲ್ಲ ಲೋಕರಂಜನೆ ಲೇಖಕರ ಧ್ಯೇಯವಲ್ಲ. ಜನ-ಮನಗಳ ಮಟ್ಟನ್ನು ಮೇಲುಕ್ಕೇರಿಸುವದೇ ಅವರ ಧ್ಯೇಯವಾಗಿರಬೇಕು ಅನೇಕ ಉತ್ತಮ ಲೇಖಕರು ಲೋಕಪ್ರಿಯರಿರಲಿಲ್ಲ ಸತ್ಯದೃಷ್ಟಿ, ಜನತೆಯ ಭಾವ ಬಯಕೆಗಳಬಗ್ಗೆ ಸಹಾನುಭೂತಿ, ಸಾಹಿತ್ಯ-ಕಲೆ ಈ ಗುಣಗಳು ಲೇಖಕರಲ್ಲಿ ರಬೇಕು ಈ ಮಾತುಗಳು ವಾಗ್ಮಿಗಳಿಗೂ ಕೇರ್ಸನ ಕಾರರಿಗೂ ಅನ್ವಯಿಸುತ್ತವೆ

ವಾಚಕರ ವೃತ್ತಿ

ಇನ್ನು ವಾಚಕರ ವೃತ್ತಿಯೂ ಇನ್ನವಾದುದಲ್ಲ. ಪುಸ್ತಕ ಕೊಳ್ಳುವದಿಲ್ಲ, ಕೊಂಡರೆ ಓದುವದಿಲ್ಲ, ಓದಿದರೆ ನೆನೆಪಿಡುವದಿಲ್ಲ; ಕಡತಂದ ಪುಸ್ತಕ ತಿರುಗಿ ಕೊಡುವದಿಲ್ಲ, ವ್ಯವಸ್ಥೆಯಿಂದ ಇಡುವದಿಲ್ಲ! ಈ ನೀತಿ ಅನುಸರಿಸುವವರು ಬಹಳ ಮಾಂಟಕ್ಕೆ ಪುಸ್ತಕಗಳನ್ನು ತಂದರೆ ಕಾಯಿಪಲ್ಲೆಯಂತೆ ಧಾರಣೆ ಕೇಳುವವರೂ ಇದ್ದಾರೆ! ವೃತ್ತ-ಪತ್ರಗಳನ್ನು ಕೊಂಡು ಕೊಂಡು ಓದುವವರೂ ಇಲ್ಲ ಸಾಕ್ಷಾತ್ಕಾರ ದೇಶಗಳಲ್ಲಿ ಕಾರಿಕಾರ ಗಂಡ-ಹೆಂಡರು ಕೂಡ ಪ್ರತ್ಯೇಕ ಪತ್ರಿಕೆ ಗಳನ್ನು ಕೊಂಡ ಸೊಳ್ಳುತ್ತಾರೆ ಇಂಗ ಪತ್ರಿಕೆ ಕಾರ್ಯದ ನಮ್ಮ ಜನರು ನಾಚಲುರಂಭಿಸಿದ್ದಾರೆ ಇದೊಂದು ಶುಭ ಲಕ್ಷಣವೆಂದೆ ಹೇಳಬೇಕು

(ತೀರ ಸಾನಿನ ಮೇಲೆ ನುಂದುವರಿದೆ)

ಸ್ಥಾನಿಕ ವೃತ್ತಾಂತ.

ಕುಮಟಾ— ರಾಷ್ಟ್ರ ಚಿನ್ನಾಗಿ ಚಳಿ ಬೀಳುತ್ತಿದೆ ಹಗಲು ಬಹಳ ರಕೆಯಾಗುತ್ತಿದೆ ಊರಲ್ಲಿ ವಿಶೇಷ ಬೇನೆ-ಬೇನೆಕಿಕೆಗಳು ಕಂಡುಬರುವದಿಲ್ಲ

ಮಾರ್ಗದಗಳ ಮೇಲೆ ಧೂಳು ಹಾರಹತ್ತಿ ೧೨ ತಿಂಗಳಾದವು ಇನವರು ತಾ ೧ ರಿಂದಾದರೂ ನಗರ ಸಭೆಯವರು ನೀರು ಹಾಕುವ ವ್ಯವಸ್ಥೆ ಮಾಡ್ಯಾರೆಂಬ ಅಪೇಕ್ಷೆಯಿತ್ತು, ಆದರೆ ಇನ್ನೂ ನೀರು ಹಾಕುವದಕ್ಕೆ ಪ್ರಾರಂಭವಾಗಿರುವದಿಲ್ಲ ನೀರು ಹಾಕುವ ಒಬ್ಬ ನಗರ ಸಭೆಯವರು ಇನ್ನೂ ನೇಮಕ ಗುತ್ತಿಗೆದಾರರನ್ನು ಹುಡುಕುತ್ತಿದ್ದಾರಂತೆ!

ಗೋಕರ್ಣದಲ್ಲಿ ಆಕ್ಟೋಬರ ತಿಂಗಳಿಂದ ಮೇ ತಿಂಗಳ ತನಕ ಹುಂಗುಸು ಮ್ಯುನಿಸಿಪಾಲಿಟಿಯವರೆ ಈಗ ಆಫ್ಲಿ ೧೨ ತಿಂಗಳ ಕಾಯಂ ಮ್ಯುನಿಸಿಪಾಲಿಟಿ ಸ್ಥಾಪಿಸುವ ಕೆಲಸ ಸರಕಾರದವರು ಇಟ್ಟುಕೊಂಡಿದ್ದಾರೆ ಆದರೆ ಊರ ಜನರಿಗೆ ಕಾಯಂ ಮ್ಯುನಿಸಿಪಾಲಿಟಿ ಬೇಕಾಗಿಲ್ಲ ಕಾಯಂ ಮ್ಯುನಿಸಿಪಾಲಿಟಿಯಾದರೆ ಮನೆ-ತೆರಿಗೆ ಯಷ್ಟು ಮುನ್ನೂರಿ, ನಿಂಬ್ಡಿ ಮಿನಸಬೇಕಾದೀತು ಈಗಿನ ಮನೆತೆರಿಗೆ ತೆರಲಿಕ್ಕೇ ಜನರಿಗೆ ಶಕ್ತಿಯಿಲ್ಲ ಹೆಚ್ಚಿನ ತೆರಿಗೆ ಅವರು ಎಲ್ಲಿಂದ ತೆರುವರು? ಗೋಕರ್ಣ ಊರು ಕಾಣಲಿಕ್ಕೆ ಶಿಸರದಂತಿದ್ದರೂ ಅದು ನಿಜವಾಗಿ ಶಿಸರವಲ್ಲ, ಒಂದು ಹಳ್ಳಿಯೇ ಸರಿ ಊರಲ್ಲಿ ಹೇಳತಕ್ಕ ವ್ಯಾಪಾರವಿಲ್ಲ, ಉದ್ಯೋಗಗಳಿಲ್ಲ ಯಾತ್ರಾರ್ಥಿಗಳಿಂಗಾಗಿ ಬರುವ ಜನರಿಂದ ಸಿಗುವ ಉತ್ಪನ್ನವೊಂ ಈ ಬಹಳ ಸುಟ್ಟಗೆ ಕಾಸ್ತಿದೆ ಅದ್ದರಿಂದ ತಮಗೆ ಕಾಯಂ ಮ್ಯುನಿಸಿಪಾಲಿಟಿ ಬೇಡವೆಂತಲೂ, ಕಾಯಂ ಮ್ಯುನಿಸಿಪಾಲಿಟಿಯ ಭಾರವನ್ನು ಸಹಿಸಲು ತಮಗೆ ಶಕ್ತಿಯಿಲ್ಲೆಂತಲೂ ಕಳೆದ ಮಂಗಳವಾರ ಬೇಟಿಯಲ್ಲಿ ಸೋಮವಾರ ಶ್ರೀಯುಗಳ ಮೇಲೆ ರಾಗಿ ವಿಚಾರಿಕರಾದ ಬಿಕ್ಕರಮನೆ ಇನರ ಅಧ್ಯಕ್ಷತೆಯಲ್ಲಿ ಕೂಡಿದ ಸಾರ್ವಜನಿಕ ಸಭೆಯು ಗೊತ್ತುವಳಿಯೊಂದನ್ನು ಮಾಡಿ ಸರಕಾರಕ್ಕೆ ಕಳಿಸಿದೆ ಈ ವಾರ ದಕ್ಷಿಣ ಭಾಗದ ಕಮಿಸನರರು ಗೋಕರ್ಣಕ್ಕೆ ಬಂದಾಗ ಜನರ ಅಂಬೋಣವನ್ನು ಅವರಿಗೆ ಸವಿಸ್ತರ ಆರುಹುವದಕ್ಕೆ ರಾ|| ಬಿಕ್ಕರಮನೆಯವರ ನೇತೃತ್ವದಲ್ಲಿ ಒಂದು ಶಿಷ್ಟಮಂಡಳ ಕಳಿಸಿರುವ ವೀಕಾಗಿಯೂ ನಿರ್ಣಯವಾಗಿದೆ [ಇಂ ೪೪ ವರ್ಷಗಳ ಹಿಂದೆ ಗೋಕರ್ಣದಲ್ಲಿ ಇದೇ ವರ್ಷ ಮ್ಯುನಿಸಿಪಾಲಿಟಿಯಿತ್ತು ಮನೆತೆರಿಗೆ ವಸೂಲಿಯ ಬಗ್ಗೆ ಆಗ ಮ್ಯುನಿಸಿಪಾಲಿಟಿಗೂ ಜನರಿಗೂ ತಂಟೆ ತಕರಾರುಗಳು ಬಂದವು ತವಾಗಿ ಮ್ಯುನಿಸಿಪಾಲಿಟಿಯೇ ಬೇಡವೆಂದು ಜನರು ಸರಕಾರಕ್ಕೆ ವಿನಂತಿ ಮಾಡಿದರು ಆಗ ಅಧಿಕಾರಿಗಳು ಸೂಕ್ಷ್ಮ ಚೌಕಶಿ ಮಾಡಿ, ಗೋಕರ್ಣ ಊರು ಒಂದು ಬರೇ ಹಳ್ಳಿಯಿರುತ್ತ ದೆಂತಲೂ, ಒಳಗೆ ಕಾಯಂ ಮ್ಯುನಿಸಿಪಾಲಿಟಿ ಆಗತ್ಯ ವಿಲ್ಲೆಂತಲೂ ಮನಾರ್ಹಿಗಾತ್ರಿಯ ಜಾತ್ರೆಯ ಕಾಲಕ್ಕೆ ಮಾತ್ರ ಊರಲ್ಲಿ ಸ್ವಲ್ಪಕಿ, ಬೆಳಕು ಆರೋಗ್ಯರಕ್ಷಣೆ ಮಾಡುವಗೋಸ್ಕರ ಕಾಂಗ್ರಾ ವ್ಯವಸ್ಥೆ ಮಾಡಿದರೆ ಸಾಕೆಂತಲೂ, ಆ ಬಗ್ಗೆ ಜನರವರಿಂದ ಪೂರ್ಣ ವರಿಗೆ ಮೂರು ತಿಂಗಳ ಹಂತಕ ಮ್ಯುನಿಸಿಪಾಲಿಟಿ ಇಟ್ಟರೆ ಕಾರ್ಯಭಾಗ ನಾಗುವಂತೆಂತಲೂ, ಯಾತ್ರಾರ್ಥಿಗಳ ಹಿತಕ್ಕಾಗಿಯೇ ಈ ವಿಶೇಷ ವ್ಯವಸ್ಥೆ ಇರುವದರಿಂದ ಆದರ ಸಿರ್ಚನ್ನು ಜಾತ್ರೆಯ ಕಾಲಕ್ಕೆ ತಕ್ಕೆ ತೆರಿಗೆ ವಸೂಲ ಮಾಡಿ ಒಟ್ಟುಗೂಡಿಸಬಹುದೆಂತಲೂ ಅಭಿಪ್ರಾಯವನ್ನು ಕಾಮಂ ಮ್ಯುನಿಸಿಪಾಲಿಟಿಯವ್ರು ರದ್ದುಪಡಿಸಿ, ಪೂರ್ತಿ ತಿಂಗಳ ಹುಂಗುಸು ಮ್ಯುನಿಸಿಪಾಲಿಟಿಯನ್ನಷ್ಟೇ ಇಟ್ಟಿರು, ಹಲವು ವರ್ಷಗಳ ವರಿಗೆ ಇದೇ ವ್ಯವಸ್ಥೆ ನಡೆಯಿತು ಇತ್ತ ೧೫ ವರ್ಷಗಳ ಹಿಂದೆ ಜಲ್ದಾಧಿಕಾರಿಗಳಿಗೆ ತರುಗಿ ಕಾಯಂ ಮ್ಯುನಿಸಿಪಲಿಟಿ ನಡಾಯಿಸುವ ಇಚ್ಛೆಯುಂಟಾಯಿತು ಜನರು ವಿರೋಧ ಮಾಡಿದರು ಮ್ಯುನಿಸಿಪಲಿಟಿಯು ಸಭಾ ಸದರೂ ವಿರೋಧ ಮಾಡಿದ್ದರು ಅವೇ ಕಾಲಕ್ಕೆ ಕಲ್ಲಿಸಂಕದ ಹಳ್ಳಿ ತುಂಬಿ ಬಂದು ಹಳ್ಳದ ನೀರು ಮುಳ್ಳಿಗಾಲದಲ್ಲಿ ಸಂಯಾಗಿ ಹರಿದು ಹೋಗದಂತಾಗಿತ್ತು ಹಳ್ಳದ ಅಕ್ಕ-ಪಕ್ಕಗಳಲ್ಲಿರುವ ಮನೆಗಳಿಗೂ ಭೂಮಿಗಳಿಗೂ ಬಹಳ ಸೆಟ್ಟಾಗುತ್ತಿತ್ತು. ಸರಕಾರದವರು ಈ ಹಳ್ಳದ ದುಮ್ಮನು ಮಾಡುವ ಯೋಜನೆಯನ್ನು ಮಂಜೂರ ಮಾಡಿದ್ದರು. ಆ ಕಾಲದ ಪ್ರಾಂತ ಸಾಹೇಬರಾದ ರಾ| ಎಸ್ ಎಸ್ ಕೊಯಮುತ್ತೂರರವರು ಈ ಯೋಜನೆ ಕಾರ್ಯರೂಪದಲ್ಲಿ ತರಬೇಕಾದರೆ, ಮನೆ ತೆರಿಗೆ ಹೇರಿ ೮ ತಿಂಗಳ ಮ್ಯುನಿಸಿಪಾಲಿಟಿಯನ್ನೂ ಮಾಡಿಕೊಳ್ಳಲಿಕ್ಕೆ ಒಪ್ಪಿಗೆ ಕೊಡಿಸಿದರು! ಮ್ಯು ಯ ಸದಸ್ಯರಿಗೆ ಕತ್ತಿಯಲ್ಲಿ ಪಿಡಿದರು! ಹೀಗಾಗಿ ಸದಸ್ಯರು ತಮ್ಮ ಮುಂಚಿನ ನಿರ್ಧಾರವನ್ನು ಬದಿಗೊತ್ತಿ ೮ ತಿಂಗಳ ಮ್ಯುನಿಸಿಪಾಲಿಟಿಗೆ ಒಪ್ಪಿಗೆ ಕೊಡಬೇಕಾಯಿತು! ಅಂತು ಕೊನೆಗೆ ೮ ತಿಂಗಳ ಮ್ಯುನಿಸಿಪಾಲಿಟಿ ಬಂತು! ಈಗ ಸರಕಾರದವರು ೧೨ ತಿಂಗಳ ಕಾಯಂ ಮ್ಯುನಿಸಿಪಾಲಿಟಿಯನ್ನು ಹೇರಬಯಸಿದ್ದಾರೆ ಈಗ ಮ್ಯುನಿಸಿಪಾಲಿಟಿಯ ಉತ್ಪನ್ನ ಮತ್ತು ಖರ್ಚು ೪೫೫ ಸಾವಿರ ರೂಪಾ ಮುಯಿಸ್ಪಿದೆ ಕಾಯಂ ಮ್ಯುನಿಸಿಪಾಲಿಟಿಯಾದ ಕೂಡಲೇ ಶಿಬಂದಿಯ ವೆಚ್ಚ ಬೇಸ್ಮುಸದು, ೨ ಲೆಯ ಖರ್ಚು ಮ್ಯುನಿಸಿಪಾಲಿಟಿಯನ್ನು ತರಬೇಕಾಗುವದು; ದವಾಖಾನೆಯ ವೆಚ್ಚದ ಭಾರವನ್ನೂ ಮ್ಯುನಿಸಿಪಾಲಿಟಿಯು ಹೊತ್ತುಕೊಳ್ಳಬೇಕಾಗುವದು ಅಂದರೆ ಮ್ಯುನಿಸಿಪಾಲಿಟಿಯ ಪುಷ್ಕಿಕ ವೆಚ್ಚ ಕನಿಸ್ಪ ೧೫ ೧೬ ಸಾವಿರಕ್ಕಾದರೂ ಮುಟ್ಟುವದು ಅದನ್ನು ತರುವದೆಲ್ಲಿಂದ? ನಂಬುವೆ ಗೋಕರ್ಣದ ಚಿಂತೆ! ಗೋಕರ್ಣ ಮ್ಯುನಿಸಿಪಲ್ ಹದ್ದಿನೊಳಗಿನ ಜನ ಸಂಖ್ಯೆ ಸುಮಾರು ೫ ಸಾವಿರವಿದ್ದಿರೆ ಕಾಯಂ ಮ್ಯುನಿಸಿಪಾಲಿಟಿಯಾದರೆ ಈ ಜನರು ತಲೆಯೊಂದಕ್ಕೆ ೩-೪ ರೂಪಾಯಿಗಳಷ್ಟು ಪೆಟ್ಟಿನ ಇರಿಗೆ ತೆರಬೇಕಾಗುವದೆ. ಅಷ್ಟು ತೆರುವ ಸಾಮರ್ಥ್ಯ ಜನರಿಂದಿಂ ಸಂಬುವ ವಿಷಯ ರ ಮಾಡಬೇಕಾದ ವಿಷಯ — ಸಂಪಾದಕ]

ಹೊನ್ನಾವರ— ಚಳಿ ಬೀಳುತ್ತಿದೆ ಊರ ಆರೋಗ್ಯ ಸಮಾಧಾನಕರವಿದೆ

ಸಂಪೂರ್ಣ ಖಾದಿಧಾರಿಗಳ ಯಾದಿಯನ್ನು ಕಳಿಸಿ ಕೊಡಬೇಕಾಗಿ ಜಿಲ್ಲಾ ಕವಿಸಾಲಿಯಿಂದ ಬರೆಸಿಬಂದಂತೆ ತಾಲೂಕ ಕೊಂಗ್ರೆಸ ಕವಿಸಾಲಿಯವರು ಖಾದಿ ತೊಡುವವರ ಚೌಕಶಿ ಮಾಡುತ್ತಿದ್ದಾರೆ

ಕತ್ತಿದ ಉದ್ಯೋಗ ಕಲಿಸುವ ಬಗ್ಗೆ ಉದ್ಯೋಗ-ಶಾಲೆಯವರು ಹೊಸ ಮಗ್ಗಗಳನ್ನು ತಯಾರಿಸಿದ್ದಾರೆ

ಇಷ್ಟು ದಿನ ಸಾಣಿಕಟ್ಟು ಸೊಸ್ಯಾಟಿಯವರದೇ ಉಪ್ಪು ಮಾರಾಟಕ್ಕೆ ಸಿಗುತ್ತಿತ್ತು ಇದೀಗ ವರ್ತಕರು ಸೊಸ್ಯಾಟಿಗೆ ಸೇರದ ಉಪ್ಪಿನ ವಾಲಿಕೆಯ ಉಪ್ಪು ಅಮದು ಮಾಡಿದ್ದರಿಂದ ಸೊಸ್ಯಾಟಿಯವರು ತಮ್ಮ ಉಪ್ಪಿನ ದರ ಇಳಿಸಿದ್ದಾರೆ

ಲಲಿತ ಕಲಾ ನಾಟಕ ಸಂಘದವರು ಭಟಕಳಕ್ಕೆ ಹೋದರು ಅವರಿಗೆ ಈ ಊರಲ್ಲಿ ತಕ್ಕ ಪ್ರೋತ್ಸಾಹ ಸಿಗಲಿಲ್ಲ.

ಮಂಕಿ—(ತಾ ೩೧-೧೨-೩೮) ಊರಲ್ಲಿ ಚಳಿಜ್ವರ, ವಿಸಮಜ್ವರ ಮುಂತಾದ ಬೇನೆಗಳವೆ ಕಾಲ-ಚಾಯಿ ಒಡೆಯುವ ದಿನಗಳ ರೋಗಗಳೂ ಅಂದಿವೆಯಿಂದು ಸುದ್ದಿಯುಂಟು

ಈ ಸರೆಗೆ ಇಲ್ಲಿಯ ಅಂಟೆ-ಕಟ್ಟೆಯಲ್ಲಿ ಊರ ಬಟನಡಿ ಶಿಪಾಮಿ ಮತ್ತು ಹಳ್ಳಿ-ಬಟನಡಿ ಶಿಪಾಯಿ ಹೀಗೆ ಇಬ್ಬರು ಬಿಪಾ-ಶಿಪಾಯಿಗಳವ್ರು ಇದೀಗ ಬಿಪಾಲ ಇಲಾಖೆಯವರು ಊರ-ಬಟನಡಿ ಶಿಪಾಯಿಯ ಸ್ಥಳವನ್ನು ಕಡಿಮೆ ಮಾಡಿ ಒಬ್ಬ ಸೈಶಲ್ ಬಟನಡಿ ವಿಜಂಟನ್ನು ನೇಮಿಸುವ ಆಲೋಚನೆ ನಡಿಸಿದ್ದಾರೆಂಬು ಸುದ್ದಿ! ಬಟನಡಿ ವಿಜಂಟನಿಗೆ ನೇಮಿಸಿದರೆ ಪುನಿಯಾರ್ದರ ವಸ್ತುಗಳನ್ನು ತೆಗೆದುಕೊಳ್ಳಲು ಜನರು ಅಂಚೆ ಕಟ್ಟೆಗೆ ಸ್ವತಃ ಬರಬೇಕಾಗುವದು ಇಲ್ಲಿಯ ಪರಿಸ್ಥಿಯಲ್ಲಿ ಅದೊಂದು

ಮಕ್ಕಳಿಗೆ ವರಪ್ರದಾನ

ಜಮ್ಮಿ ವೆಂಕಟರಮಣಯ್ಯನವರ

ಲಿವ್ವರ್ ಕ್ಯೂರ್

ಲಿವ್ವರ್ ಮತ್ತು ಯಕೃತ್

ವಿಕಾರಗಳ ಮೇಲೆ

ಅಮೋಘವಾದ ಉಪಾಯ.

ಎಲ್ಲಾ ಔಷಧ ವ್ಯಾಪಾರಿಗಳಲ್ಲಿ

ಸಿಗುತ್ತೆ.

— ಅಥವಾ —

ಜಮ್ಮಿವೆಂಕಟರಮಣಯ್ಯ

ಲಿವ್ವರ ಮತ್ತು ಸ್ಪ್ಲೀನ ಸ್ಪೆಶಲಿಸ್ಟ,

ಮೈಲಾಪುರ-ಮದ್ರಾಸ ಇವರಿಂದ ತರಿಸಿಕೊಳ್ಳಿರಿ.

ಶಾಖೆ.— ಆರ್ಕಾಟ ತ್ರಿನಿವಾಸಾಚಾರ ಬೀದಿ, ಬೆಂಗಳೂರು ಸಿಟಿ

ಸ್ಥಾನಿಕ ವೃತ್ತಾಂತ

(೧ನೇ ಪುಟದಿಂದ ಮುಂದರಿದಿದ್ದು)

ಜನವನ್ನೂ ಲೆಕ್ಕದ ಬೂಕುಗಳನ್ನೂ ತಮ್ಮ ಮನೆಗೆ ಒಯ್ದು ಪರೀಕ್ಷಿಸುತ್ತಾರೆ! ಚೀಫ್ ಆಫೀಸರರು ಕಚೇರಿಯಲ್ಲಿ ನಿಗುವದು ಅಪೂರ್ವ! ಕೇಳಿದರೆ ತಮಗೆ ಮಧ್ಯಾಹ್ನದ ೨ ಗಂಟೆಯಿಂದ ೬ ಗಂಟೆಯ ವರೆಗೆ ಕೆಲಸ ಮಾಡಲು ಅಧ್ಯಕ್ಷರ ಶಿಪ್ಪಸೆಯಾಗಿದೆಯೆಂದು ಹೇಳುತ್ತಾರೆ! ಇಂಥ ಚೀಫ್ ಆಫೀಸರರು ದಾಪಾಗಲೂ ಅಧ್ಯಕ್ಷರ ಕೋರ್ಟು ವ್ಯವಹಾರಕ್ಕೆ ಕೆಲಸ ತಪ್ಪಿಸಿಕೊಂಡು ಧಾರವಾಡ-ಬೆಳಗಾವಿಗಳಿಗೆ ಹೋಗುತ್ತಿರುತ್ತಾರೆ! ಜನರು ಚಾಕರಿ ಪಟ್ಟಿಗಳಂತೆ ಅವರ ಹಾಜಿ ಕಾಯಬೇಕು! ನಗರ-ಸಭೆಯ ಉಪಸಮಿತಿಗಳಾಗಲಿ ತಮಗೆ ಬೇಕಾದ ಜನರಿಂದ ಘಟಿಸಲ್ಪಡಬೇಕಾದ ಕೆಲಸಗಳನ್ನು ಚೀಫ್ ಆಫೀಸರರೂ ಆದರೆ ಕೆಲಸಕ್ಕೆ ವಿಘ್ನ ಮಾಡುತ್ತಿದ್ದಾರಂತೆ! ಇವರಿಗೆ ಸೇವೆದ ಜನರು ತೆರಿಗೆ ವಸೂಲು ಕೊಡಲು ತಾವು ವಿಳಂಬ ಮಾಡಿದರೆ ಕೂಡಲೆ ಮನೆಯಂ ಬರುತ್ತದೆ! ಥೋ! ಇಂಥ ಜನರ ಜಾವಿಗೆ ಹೋಗಲು ಒಂದು ರಸ್ತೆ ಮಾಡಲಿಕ್ಕೆ ಕೆಲ ಭೂಮಿ ಎಕ್ಕಾಯಿ ಮಾಡಿಕೊಡಲು ಸರಕಾರಕ್ಕೆ ಅಂಕೆ ಮಾಡಬೇಕೆಂದು ಮ್ಯುನಿಸಿಪಾಲಿಟಿಯ ರಠಾವಾತ್ತು. ಅದರಲ್ಲಿ ಅಧ್ಯಕ್ಷರ ಕೆಲವು ಭೂಮಿಯನ್ನೂ ಎಕ್ಕಾಯಿ ಮಾಡಬೇಕಿತ್ತು. ಅಧ್ಯಕ್ಷರು ೨-೩ ತಿಂಗಳು ಸದರಿ ರಠಾವು ಮುಂದೆ ತರಲಿಲ್ಲ!

ಯಲ್ಲಾಪುರದ ಟೌನು ಪಿತಾಯಿ ಫೋರ್ಮನ್ ಇವನ ಮೇಲೆ ನಡೆದ್ಯಕ್ಕೆಸ್ಸ ಬಿಟ್ಟಿಯಲ್ಲಿ ಪ್ರತಿಯೊಂದು ಮುನ್ನೆಗ ೯-೯ ತಿಂಗಳಂತೆ ೧೮ ತಿಂಗಳ ಸಜ್ಜಮ ಶಿಕ್ಷೆ ವಿಧಿಸಲಾಗಿದೆ

ಇಲ್ಲಿಯ ಛತ್ರದ ವ್ಯಾಪಾರಿಗಳು ಛತ್ರ ಕೊಂಡುಕೊಳ್ಳುವಾಗ ಹಳೇ ಪದ್ಧತಿಗಳನ್ನು ಪರಿಶೋಧಿಸುತ್ತಾರೆ, ಮಾರುವಾಗ ಹೊಸ ಅಳತೆಗಳನ್ನು ಪ್ರಯೋಗಿಸುತ್ತಾರೆ ತೂಕಳತೆ-ಕಾನೂನುಗಳ ಒಪ್ಪಿ ಅವು ತಿ ಹಿಂದುಬರೋತ್ತು.

ಇಲ್ಲಿಯ ದನಗಳ ಚಿತ್ತಕರು ಹಳ್ಳಿಸಂಚಾರದ ಕಾರ್ಯಕ್ರಮ ರೆಡಿಯಾಗುತ್ತಿರುವದು ಆದರೆ ಅವರ ಸಂಚಾರ ಮಾಡುವವಿಲ್ಲಿ ಜನರು ಇವರ ಹಾದಿ ನೋಡಿ ಬೇಸತ್ತು ಹೋಗುತ್ತಾರೆ ಕಳ್ಳಿಗಳ ಆಟಕ್ಕಿತ ಜನರಿಗೆ ಇವರು ಒಮ್ಮೆ ಮೈ ಪಾಮಿಗೆ ಬಂದಂತೆ ಬೈಯುತ್ತಾರೆಂಬಲ್ಲಿ ಸಂಶಯವಿಲ್ಲ. ಇವರ ಕೆಲಸ ಬುದ್ಧಿಪೂರ್ವಕವಾಗಿ ಸೂಚನೆಯಂತು

ಚಕ್ರಬಿಂದು ಮಕ್ಕಳ ಮರಣವನ್ನು ತಪ್ಪಿಸುವುದು.

(ರಿಜಿಸ್ಟರ್ಡ್) (ಲಿವರ ಕ್ಯೂರ್)

ವಿಜಸ್ಸಿ ಕಲಕತ್ತಾ, ಮುಂಬಯಿ, ಮದ್ರಾಸ, ಬೆಂಗಳೂರು, ಮಂಗಳೂರು.

Spleen and Liver Enlargement for Children.

ಮಕ್ಕಳ ಯಕೃತ್, ಪ್ಲೀಹ, ಹೊಟ್ಟೆ ದೊಡ್ಡದಾಗುವಿಕೆ, ಹಸುರು ನರಗಳು, ಕಾಮಿಲೆ, ಗಡ್ಡೆರೋಗ, ಕೋನೆರೋಗ, ಮೈ-ಕೈ ಬಾವುಗಳಿಗೆ ದಿವ್ಯೌಷಧ!

1 ತಿಂಗಳಿಗೆ ಸಾಕಾಗುವ ಔಷಧದ ಬೆಲೆ ರೂ 3.

ಏತಕ್ಕೆ ಚಿಂತಿಸುವಿರಿ?

ಆಸೇತುಹಿಮಾಚಲದ ವರೆಗೂ 43 ವರುಷಗಳಿಂದ ಕೀರ್ತಿ ಪಡೆದಿರುವ - ಮಕ್ಕಳ ಪ್ಲೀಹ ಮತ್ತು ಲಿವ್ವರ್ ವ್ಯಾಧಿಗಳಿಗೆ ಇದೊಂದೇ ರಾಜಔಷಧವಾಗಿದೆ

ಡಾ| ಏ ಎನ್ ತ್ರಿನಿವಾಸರಾವ್
ಲಿವ್ವರ್ ಸ್ಪೆಶಲಿಸ್ಟ್,
ಎಂ ವಿ. ವ್ಯಾಸಾಶ್ರಿತ ಔಷಧಾಲಯ,
ಶಿವಮೊಗ್ಗಾ

☛ ಇವರಲ್ಲಿ ವಿಚಾರಿಸಿರಿ.

ವಿಜಂಬ —
ಸುಬ್ರಾಯ ಸೀತಾರಾಮ ಹೆಗಡೆ, ಶಿರಸಿ

ದಿ ಹನುಮಾನ್ ಟ್ರಾನ್ಸಪೋರ್ಟ ಕಂಪೆನಿ, ಲಿಮಿಟೆಡ್,
ಉಡುಪಿ. ದ. ಕನ್ನಡ.

ಹೊಸ ಬಸ್ಸುಗಳು! | ಮಿತವಾದ ದರಗಳು! | ಹೊಸ ಲೈನು!!

ಪ್ರಯಾಣಿಕರ ಸೌಕರ್ಯವೇ ನಮ್ಮ ಮುಖ್ಯ ಧ್ಯೇಯ.

ನಿಯಮಿತ ಕಾಲಕ್ಕೆ ಸರಿಯಾಗಿ ಬಿಡುವ ಸರ್ವಿಸುಗಳು

ನಮ್ಮ ಕಂಪನಿಯ ಬಸ್ಸು ಸರ್ವ್ಹಿಸುಗಳು ತಾ ವರೆಗೆ ಕಾಸರಕೋಡ ವರೆಗೆ ಮಾತ್ರ ಚಲಾವಣೆಯಲ್ಲಿದ್ದು, ತಾರೀಕು 28—4—1938ರಿಂದ **ಕಾಸರಕೋಡಿನಿಂದ ಹೊನ್ನಾವರ, ಕುಮಟಾ, ಅಂಕೋಲಾ ಮತ್ತು ಕಾರವಾರ ವರೆಗೆ** ಚಲಾವಣೆಯೊಗುವಂತೆ ಸುವ್ಯವಸ್ಥೆಯನ್ನು ಮಾಡಿರುವೆವು ದಕ್ಷಿಣ ಕನ್ನಡ ಜಿಲ್ಲೆಯಿಂದ ಬೆಳಿಗ್ಗೆ ಹೊರಟರೆ ಅದೇ ದಿನ ಸಾಯಂಕಾಲವೊಳಗೆ ನಿರಾಯಾಸವಾಗಿ ಕಾರವಾರಿಗೆ ತಲಪುವಂತೆ ಯೋಗ್ಯ ಏರ್ಪಾಡು ಮಾಡಿರುತ್ತದೆ ನಿಮಗೆ ಅನುಕೂಲ ಉಂಟಾವಲ್ಲಿ! ದಯವಿಟ್ಟು ನಮಗೆ ತಿಳಿಸಿದಲ್ಲಿ ಅವುಗಳಿಗೆ ಯೋಗ್ಯ ಗಮನ ಕೊಡುವೆವು ಪ್ರಯಾಣಿಕರು ಪ್ರೋತ್ಸಾಹಿಸಬೇಕಾಗಿ ವಿನಂತಿ.

ಮಿತ ದರ! = ನಿಶ್ಚಿತ ಸಮಯ!! = ಸೌಕರ ವಿನಯ-ನಮ್ರತೆ!!!

ಇವುಗಳಲ್ಲವೇ ಪ್ರಯಾಣಿಕರಿಗೆ ಬೇಕಾದದ್ದು?

THE HANUMAN TRANSPORT CO., LTD.,
UDIPI. S. KANARA.

ಮಂಗಳವಾಡ ಗ್ರಾಮವು ದೊಡ್ಡದಿದ್ದರೂ ಅಲ್ಲಿಗೆ ಮೊಗ್ಗ-ಸೌಕರ್ಯವಿದ್ದಿಲ್ಲ ತಾಲೂಕ ಆಫೀಸರಿಗಳ ಪ್ರೋತ್ಸಾಹನೆಯಿಂದ ಹವಿ ಮತ್ತು ಮಂಗಳವಾಡ ಹೈಗಳ ಸಂಬಾಯಣ ಕಮಿಟಿಯವರು ಎರಡೂ ಹೈಗಳ ನಡುವೆ ಕೊಸ ರಸ್ತೆ ತಯಾರಿಸಕತ್ತಿದ್ದಾರೆ ಸರಕಾರದಿಂದ ಈ ಬಗ್ಗೆ ರೂ ೧೦೦ ಸಿಕ್ಕಿದೆ ಹವಿಯಿಂತೂ ಆಳಕಾವರ ರಸ್ತೆಗೆ ಹೊಂದಿಕೊಂಡಿದೆ ಇದಲ್ಲದೆ ಮಂಗಳವಾಡ ಊರವರು ಕೊಸ ವ್ಯಾಯಾಮ ಕಲಿಯಸ್ಸು ಕಟ್ಟಿಸಿ ಬೀರೊಂದು ಕಡೆ ಯಲ್ಲಿದ್ದ ವಾಚನಾಲಯವನ್ನು ಅದರಲ್ಲೇ ತಂದಿಡುವ ಸಂಕಲ್ಪ ಮಾಡಿದ್ದಾರೆ

ಇಲ್ಲಿ ಬದಲಿ ಮಾಮಲೇದಾರರಾಗಿ ಬಂದ ರಾ ಕಾಶಿಕರಿಗೆ ಭಟಕಳ ಮಜಾಲಕರು ಸ್ಥಳಕ್ಕೆ ವರ್ಗವಾಗಿದೆ ಕಾಯಂ ಮಾಮಲೇದಾರರು ನಾಳೆ ತಮ್ಮ ಸ್ಥಳದಲ್ಲಿ ಕಾಜ ರಾಗುತ್ತಾರೆ

— —

ಪೊಪ್ಯುಲರ ಇನ್ಶೂರೆನ್ಸ ಕಂಪನಿ, ಲಿ.
ಮಂಗಳೂರು

ಮದ್ರಾಸ ಶಾಖೆಯ ಉದ್ಘಾಟನ.

ಕಳೆದ ದಿಸಂಬರ ತಿಂಗಳ ತಾ ೫ರೀಗೆ ಮಂಗಳೂರಿನ ಪೊಪ್ಯುಲರ ಇನ್ಶೂರೆನ್ಸ ಕಂಪನಿಯವರು ಮದರಾಸಿನಲ್ಲಿ ತಮ್ಮ ಮೊಂದು ಶಾಖೆಯನ್ನು ತೆರೆದು ರಾ ಏ ಶ್ರೀನಿವಾಸ ರಾವ್, ಬಿ ಸ, ಬಿ ಎಲ್, ಇವರಿಗೆ ಅಶಾಖೆಯ ಕಾರ್ಯ ದರ್ಶಿಗಳಾಗಿ ನೇಮಿಸಿದ್ದಾರೆ ಈ ಸಂದರ್ಭದಲ್ಲಿ ಕಂಪನಿಯ ಡಾಲಕರು ಬಜಾವಾನ ಸಮಾರಂಭವೊಂದನ್ನು ಏರ್ಪಡಿಸಿದ್ದರು ನ್ಯಾ! ಮಾ! ಅಣ್ಣಾವ, ಪಬ್ಲಿಕ್ ಪ್ರೊಸಿಕ್ಯೂಟರ್ ಟಿ ಎಂದಿ ಜ, ಸರಕಾರಿ ವಕೀಲ ರಾ ಸೀತಾಮಾವ್, ರಾ ಬ ಡಾ! ಕೇಶವ ಪೈ ಮೊದಲಾದ ಮಶಸ್ಸಿಯರೂ, ವಿಮಾಖಾತೆ ಗವರ್ನಮೆಂಟ ಸೆಕ್ರೂರಿ ಟಿ ವಿಮಾ ಕಂಪನಿ, ಯುನೈಟೆಡ್ ಇಂಡಿಯನ ವಿಮಾ ಕಂಪನಿ, ಇಂಡಿಯನ್ ಮ್ಯುಚ್ಯುಅಲ್ ವಿಮಾ ಸಂಘ,ಹಿಂದು ಕೊ ಒಪರೇಟಿವ್ ವಿಮಾ ಸಂಸ್ಥಿ ಮುಂತಾದ ವಿಮಾ ಸಂಸ್ಥೆಗಳ ಸ್ಥಾನಿಕ ಪ್ರತಿನಿಧಿಗಳೂ ಈ ಸಮಾರಂಭಕ್ಕೆ ಬಂದಿದ್ದರು ಕಂಪನಿಯ ಮನೇಜಿಂಗ ಡಾಯರೆಕ್ಟರರಾದ ರಾ ಬಿ ವಿಟ್ಠಲರಾಯರು ಆಭ್ಯಾಗತರಿಗೆ ಸ್ವಾತ ಓಯರು ತ್ತ, ಕಂಪ ಮು ಜನ್ಮವೆತ್ತಂದಿನಿಂದ ಈ ವರೆಗೆ ಮಾಡಿದ ಪ್ರಗತಿಯನ್ನು ವಿವರಿಸಿದರು ಮತ್ತು ಆಂಕೆ ಸಂಖ್ಯೆಗಳನ್ನು ಕೊಟ್ಟು ಕಂಪನಿಯ ಸಾಂಪ್ರತಿಕ ಸ್ಥಿತಿಯು ಭದ್ರವಿರುತ್ತದೆಂದು ಕೊಂಡಾಡಿದ್ದರು ಮದ್ರಾಸಿನ ಜನತೆಯು ತಮ್ಮ ಕಂಪನಿಗೆ ಈ ಹಿಂದೆಯೇ ತಕ್ಕ ಪ್ರೋತ್ಸಾಹ ಕೊಟ್ಟಿದ್ದಕ್ಕಾಗಿ ಕಂಪನಿಯವರು ಆ ನಗರದಲ್ಲಿ ಶಾಖೆಯನ್ನು ತೆರೆಯಲು ಉದ್ಯುಕ್ತರಾದರಾಗಿಯೂ ಅವರು ತಿಳಿಸಿ ಹೇಳಿದರು ರಾ ಸೀತಾರಾಮರಾವ್, ರಾ ಬ ಡಾ ಕೇಶವಪೈ, ರಾ ಅನಂತ ನಾರಿ ಮೆಲ್ ರಾ ಕೇ ಸಂಜೀವ ಕಾಮತ ಅವರು ಸಮಯೋಚಿತ ಚಿಕ್ಕ ಭಾಷಣಗಳನ್ನು ಮಾಡಿ ಕಂಪನಿಯ ಪ್ರಗತಿಯ ಬಗ್ಗೆ ಸಂತೋಷೋದ್ಗಾರ ಮಾಡುತ್ತರುವ ಮೆಸೆಜರ್ ಡ್ಯಾಕ್ಟರ್ ರಾ ವಿ ವಿಟ್ಠಲರಾಯರನ್ನು ತುಂಬಾ ಹೊಗಳಿದರು ಮತ್ತು ಕಂಪನಿಯ ಶಾಖೆಯನ್ನು ಹೃತ್ಪೂರ್ವಕ ಸ್ವಾಗತಿಸಿ ಜನತೆಯು ದಕ್ಷಿಣ ಭಾರತದ ಈ ಕಂಪನಿಗೆ ಉಜ್ವಲಭವಿಷ್ಯವನ್ನು ಕೊಡಬೇಕೆಂದು ಬಿನ್ನವಿಸಿದರು ಮತ್ತು ರಾ ಶ್ರೀನಿವಾಸರಾಯರಂತಹ ಲೋಕಪ್ರಿಯರಿಗೆ ಕಾರ್ಯ ದರ್ಶಿಗಳಾಗಿ ನೇಮಿಸಿದ ಬಗ್ಗೆ ಕಂಪನಿಯ ಡಾಲಕರನ್ನೂ ಅಭಿನಂದಿಸಿದರು

—

ॐ ಶ್ರೀ ಭುವನೇಶ್ವರಿ ಪ್ರಸನ್ನ ॥

ಶ್ರೀ ಭುವನೇಶ್ವರೀ ವ್ಹೀವಿಂಗ ಲೂಮ್ಸು, ಗೋಕರ್ಣ.
(ಉತ್ತರ ಕನ್ನಡ.)

ಬನ್ನಿರಿ! ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ!! ಬನ್ನಿರಿ!!!

ಇಲ್ಲಿಯ ಕೈಮಗ್ಗದಲ್ಲಿ ತಯಾರಾದ ನ್ಯಾಲುಗಳನ್ನು ಒಮ್ಮೆ ನೋಡಿರಿ!

ಪಕ್ಕಾ ಬಣ್ಣ! ಜಾಸ್ತಿ ನ್ಯಾಲು!! ಬೆಲೆ ಕಡಿಮೆ!!!

ನಮ್ಮ ಮಗ್ಗದಲ್ಲಿ

ತರತರದ ಧೋತರಗಳು, ನಮೂನೆವಾರ ಶೀರೆಗಳು, ಕಿರಿಗೆಗಳು, ಪಂಜಿಗಳು
ಇವಲ್ಲದೆ ಇನ್ನೂ ,ಅನೇಕ ಹೊಸ ಹೊಸ ನಮೂನೆಯ ಜವಳಿಗಳು
ತೋಕಾಗಿಯೂ ಚಿಲ್ಲರೆಯಾಗಿಯೂ ಯೋಗ್ಯ ಬೆಲೆಗೆ ಸಿಗುತ್ತವೆ

ನ್ಯಾಲಿನ ಬಣ್ಣದ ಬಗ್ಗೆ ಗ್ಯಾರಂಟಿ.

ಆರ್ಡರಿನ ಜೊತೆಗೆ ಅರ್ಧ ಹಣ ಮುಂಗಡ ಕೊಟ್ಟಲ್ಲಿ
ಒಂದು ತಿಂಗಳಲ್ಲಿ ಆರ್ಡರಿನಂತೆ ನ್ಯಾಲು ಪೂರೈಸಲಾದೀತು

☞ ನಾವು ಕೈಯಿಂದ ತೆಗೆದ ನೂಲು ಕೊಂಡುಕೊಳ್ಳುತ್ತೇವೆ, ಇಷ್ಟಪಟ್ಟವರಿಗೆ ಆ ನೂಲಿನಿಂದ ಬೇಕಾದ ಬಟ್ಟೆಗಳನ್ನು ತಯಾರಿಸಿ ಕೊಡುತ್ತೇವೆ.
ನಮ್ಮಲ್ಲಿ ನ್ಯಾಲು ಖರೀದಿಸಿದಲ್ಲಿ ತಾನೇ ಎಲ್ಲರೂ ಖುಶಿಪಡುವುದು.

ವಿ. ಎನ್ ಗೋಪಿಭಟ್ಟ,
ಪ್ರೊಪ್ರಾಟರ

ಔಷಧಿಕ್ಷ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನಂಜನಗೂಡು ಟೂತ್ ಪೌಡರ್. (ರಜಿಸ್ಟರ್ಡ)

ಹಲ್ಲುಗಳನ್ನು ಶುಭ್ರವಾಗಿಡುವದರಲ್ಲೂ, ಗಟ್ಟಿಪಡಿಸುವದರಲ್ಲೂ ಜಗತ್ಪ್ರಸಿದ್ಧವಾಗಿದೆ

ಶ್ರೀಕರ ಕಸ್ತೂರೀ ಮಾತ್ರೆ. [ಪೊಟ್ಟಣಕ್ಕೆ 0-1-0

ಸುವಾಸನೆಯುಳ್ಳ ಈ ಮಾತ್ರೆಯು ಮುಕ್ಯವಾಗಿ ಮತ್ತು ದೊಡ್ಡನರ ನೆಗಡಿ, ಕೆಮ್ಮು, ಅಜೀರ್ಣ, ಜ್ವರ ಮುಂತಾದ್ದಕ್ಕೆ ಸಿದ್ಧೌಷಧವಾಗಿದೆ. ಬೆಲೆ 0—4—0, 0—2—0

ಶ್ರೀಕರ ಬಾಲಸಂಜೀವಿನಿ.

ಚಿಕ್ಕ ಮಕ್ಕಳ ಮಂದಜ್ವರ, ಶೀತಜ್ವರ, ಎಳವು ಇತ್ಯಾದಿ ರೋಗಗಳಿಗೆ ಸಂಜೀವನ ಬೆಲೆ 0—4—0

ದೊರೆಯುವ ಸ್ಥಳ - ಹೊನ್ನಾವರ ಕಲ್ಯಾಣಪುರ ಬ್ರದರ್ಸ ಕುಮಟಾ. ದೇವಸ್ಥಾ
ನ ಮ್ಯು ನಾಯ್ಕ, ದಿ ನ್ಯೂ ಸಕ್ಸಾಯ ವಿಜಸ್ಟ್, ದಿ ಸ್ವದೇಶಿಕ ಫಾರ್ಮಸಿ
ಪಕ್ಕೆ ನಂಜನಗೂಡು ಸದ್ವೈದ್ಯಶಾಲಾ, ಬ್ರಾಂಚ್: ರಥಬೀದಿ, ಮಂಗಳೂರು.

ಬನ್ನಿರಿ! —॥ ಶ್ರೀ ಚಂದ್ರಮೌಳೀಶ್ವರ ಪ್ರಸನ್ನ ॥— ನೋಡಿರಿ!!

ಉಡುಪಿ ಬ್ರಾಹ್ಮಣರ

ದಿ ಮೊಡರ್ನ ಹಿಂದೂ ಹೊಟೆಲ್,

ಮಹಾಶಯರೇ, ಕುಮಟಾ. (ಉ. ಕನ್ನಡ.)

ಶ್ರೀ ಗೋಕರ್ಣ ಕ್ಷೇತ್ರಕ್ಕೆ ಬರುವ ಹೊರ ಬ್ರಾಹ್ಮಣರೇ ನೋಡಲಾಗಿ
ಎಲ್ಲಾ ಮತದ ಪರಊರಿನ ಪ್ರವಾಸಿಕರಿಗೂ, ಹುಬ್ಬಳ್ಳಿ, ದಾರವಾಡ, ಬೆಳಗಾಂವ
ಕಡೆಗೆ ಹೋಗುವ ಟ್ರಿವ್ಹಲರರಿಗೂ ಉಳಕೊಳ್ಳಲಿಕ್ಕೂ, ಇತರ ಊಟೋಪಚಾರಕ್ಕೂ
ಬಹಳ ಸೌಕರ್ಯವುಳ್ಳದ್ದಾಗಿ ಇತ್ತೀಚೆಗೆ ಹೊಸದಾಗಿ ತೆರೆದಿರುವ ನಮ್ಮ

"ದಿ ಮೊಡರ್ನ ಹಿಂದೂ ಹೊಟೆಲ್"ದಲ್ಲಿ ಬಂದು ಅನುಭವ ಪಡೆಯಿರಿ!

ಸೂಚನೆ.— ವ್ಯವಸ್ಥೆ ಬಗ್ಗೆ ಪರಊರಿನವರು ಪತ್ರ ಮೂಲಕ ತಿಳಿಯುವದುತ್ತಮ

ಬಿ. ರಾಮಕೃಷ್ಣಯ್ಯ, ಮಾಲಕ

ಹೊಸ್ತ ಕಛೇರಿಯವರು ಇಲ್ಲಿ ನಮಾಯತರ ವಸತಿ ಬಳಕೆ. ನಮಾಯತ ಗಂಡಸರು ಹೆಬ್ಬಾಗಿ ಪತಸ್ಯಗಳಲ್ಲಿರುತ್ತಾರೆ ಇದ್ದರುವವರು ಬಹುತೇಕ ಹೆಂಗಸೇ ಆದರಿಗೆ ದಿನಾಲು ಮಾನಯೋರ್ತರಗಳು ಬರುತ್ತಿದೆ ಈ ಹೆಂಗಸರು ಪೂಜಾ ಪದ್ಧತಿಯವರು. ಆವರು ಮನಿಯಾರ್ಡರ ಇಲ್ಲಿನ ಇನಪೊರ ಪತ್ರ ತಕ್ಕೊಳ್ಳಲಿಕ್ಕೆ ಟಿಗಾಲ ಕಟ್ಟಿಗೆ ಬರುವರೆಂತಾ ? ಊರ ಬಟವಡೆ ಕಿಶಾಯಿಗೆ ಸಾಕಷ್ಟು ಕೆಲಸವಿಲ್ಲವೆನ್ನಲಾಗದೇ ? ಹಾಗೆನ್ನಲು ಬರಲಾರದು ದಿನಾಲು ಆತನಿಗೆ ೧೫ ಮೈಲು ತಿರುಗಾಟ ಬೀಳುತ್ತದೆ ದಿನಾ ಎರಡಾವರ್ತಿ ೧ ಸೈಲು ದೂರವಿರುವ ಮಾಮನಕಟ್ಟೆಗೆ ಹೋಗಿ ಟಿಫಾಲ-ಟೀಲಗಳನ್ನು ತರಬೇಕು, ಒಯ್ಯಬೇಕು ! ದಿವಸವಲ್ಲ ೮-೯ ತಾಸು ದುಡಿದರೂ ಕೆಲಸ ತೀರದು ನದಿಲ್ಲ ! ಹೀಗಿದ್ದು ಪರಿಸ್ಥಿತಿಯಿರುವಾಗ, ಊರ ಬಟವಡೆ ಕಿಶಾಯಿಯ ಸ್ಥಳ ಕದಿಸಿ ಮಾಡಿ ಏಜಂಟರಿಗೆ ನೇಮಿಸುವದು ಏತಕ್ಕೆ ? ಟಿಪಾಲ ಇಲಾಬೆಯವರು ಹಳೇ ವ್ಯವಸ್ಥೆಯನ್ನೇ ಇರಿಗೊಡಬೇಕಾಗಿ ಸೂಚನೆ ಹೊಸ ವ್ಯವಸ್ಥೆ ಅಮಲಿಗೆ ನಲ್ಲ ತಂದು ಜನರಿಗೆ ಅವರು ಕಷ್ಟದಲ್ಲಿ ಹಾಕಬಾರದು

ಅವುರ್ಸಾ— (ತಾ ೪೦-೧೨-೪೮) ಇಲ್ಲಿಯ ಕೊಂಕ್ರೆಸ ಕೆಲಸಗಾರರಾದ ರಾ! ಶಾಂತಾರಾಮ, ಪ್ರಭುವರು ಭಟಕಳ ನೆರೆ-ಸಂತ್ರಸ್ತರ ಸಹಾಯಕ್ಕಾಗಿ ಕೆಲಸದಿಂದ ರೂ ೫-೦೦-೦ ಕೊಡಿಸಿ ಜಿಲ್ಲಾಧ್ಯಕ್ಷರಿಗೆ ಕಳಿಸಿ...ಪ್ಪಿದ್ದಾರೆ.

ಏನ್ಸೆಯಿಂದ ಊರ ತುಂಬ ಹೊಲಸು ನಾತ ಹಬ್ಬಿದೆ ! ಕೆಲ ಆಲ ಜನರಿಗೆ ಇದೇನೆಂದು ತಿಳಿಯಲಿಲ್ಲ ಮುಂದೆ ಜೋಕಿ ಮಾಡಲಾಗಿ, ಹಾರವಾಡೆಯಲ್ಲಿ ಯಾರೋ ದಿನಾ ಗೊಬ್ಬರ ತರುವಾರಿ ಅದನ್ನೀಗ ಹೊರಗೆ ತೆಗೆದಿವ್ಯಾರೆಂದೂ, ಆದರ ವಾಸನೆ ನಾಲ್ಕೂ ವಿಕ್ಕೆಗೆ ಹಬ್ಬಿಕೊಂಡಿರುತ್ತದೆಂತಲೂ ತಿಳಿದು ಬಂತು ಈ ದುರ್ಗಂಧದಿಂದ ಊರಿಟ್ಟುಳಿಯುವದು ಕಷ್ಟ ! ಬೇನಿಗೆಲೂ ಬರಬಹುದು ! ಆಧಿಕಾರಿಗಲು ಚೌಕಶಿ ಮಾಡಿ ಹೊಲಸು ಹಬ್ಬುವಂತೆ ವ್ಯವಸ್ಥೆ ಮಾಡಬೇಕಾಗಿ ಸೂಚನೆ

ಬೆಳ್ಳೇಕೇರಿ— ಇಲ್ಲಿ ಮಾರ್ಚಗಳೆಲ್ಲರು ಬಡವಾಟು ಮಾಡಿಕೊಂಡಿರುತ್ತಾರೆಂತಲೂ, ಆ ಬಗ್ಗೆ ಒಬ್ಬನು ಅಂಕೋಲಾ ಮೆಜಿಸ್ಟ್ರೇಟರ ಮುಂದೆ ಧಿರ್ಯಾದು ಮಾಡಿರುತ್ತಾನೆಂತಲೂ ತಿಳಿಯುತ್ತದೆ ಅದೋಸು ಸಾರ್ವಜಿಗೆ ಮೆಜಸ್ಟ್ರೇಟರ ಕಡೆಯಿಂದ ಸಮನ್ಸು ಹೊರಟಿದೆ ಪೋಲೀಸರು ಸಮನ್ಸು ತಕ್ಕೊಂಡು ಬಂದಾಗ ಆರೋಪಿಯು ಇಲ್ಲದಲ್ಲಿ ತನ್ನ ಉದ್ಯೋಗದ ದೆಸೆಯಿಂದ ಬೆಂಡಿಯೆಗೆ ಹೋಗಿದ್ದನು ಬಂದ ಪೋಲೀಸಕಿಶಾಯಿಯು ಬೆಂಡಿಯೆಗೆ ಹೋಗದೆ ಯಾ ಅಲ್ಲಿ ಸಮನ್ಸು ತಕ್ಕಸದೆ, ' ಆರೋಪಿಗೆ ಈಗಿಂದೀಗ ತಂದು ಒಪ್ಪಿಸಿರಿ, ಇಲ್ಲದಿದ್ದರೆ ದಕ್ಷಿಣಿ ಮಾಡಬಾರ್ದೀತು ' ಎಂದು ಆರೋಪಿಯ ಜಾತಿಯವರಿಗೆ ಬಯಲ ಬಿದರಿಸಿದನೆಂತೆ ! ಆವ ನಿಗೆ ಆಂಜಿ ಜಾತಿಯವರು ಆರೋಪಿಗೆ ಕರೆತರಲು ಒಬ್ಬ ಮನುಷ್ಯನನ್ನು ಬೆಂಡಿಯೆಗೆ ಕಳಿಸಿ ಕೊಡಬೇಕಾಯಿತು ! ಪೋಲೀಸರು ಹಕ್ಕಿಗಳಲ್ಲಿ ಕೆಲಸ ಮಾಡುವ ನಮೂನೆಯಿದು ! ಮೇಲಧಿಕಾರಿಗಳು ಆವರಿಗೆ ಪರಯಾಗಿ ಬುದ್ಧಿ ಹೇಳಬಾರದೇ?

ಸ್ಯಾಂತಾಕ್ಷೆಸ್ತವರ ದೇವಿ ಭಾ ದೇಶಾಂತರಿಯವರು ಇಲ್ಲಿ ಬಂದು ಹೋದೆಂದಿನಿಂದ ಬೆಂಡಿಯ ಸಂಬಂಧಿ-ಆಗಂದಿಗೆ ಹೋಗುವವರ ಸಂಖ್ಯೆ ೧೦೦ಕ್ಕೆ ಅಂದಾಜು ಕದಿಮೆ ಯಾಗದೆ ಪ್ರಾಂತಿಕ ಮುಂಪಾಳುಗಳು ಇವೇ ರೀತಿ ಮೇಲಿಂದ ಮೇಲೆ ಸಂಚರಿಸಿ ಸದ್ಭಾವನೆಯ ಪ್ರಚಾರ ಮಾಡಿದರೆ ಮಧ್ಯಪ್ರತಿಬಂಧ ಕಾರ್ಯ ಬಹಳ ಸುಕರವಾಗುವದೆಂಬ ಬೇರೆ ಹೇಳಬೇಕೇ ?

ಕಾರವಾರ— ಶಕರವ ತಿಲ್ಲ ಭಾಗಗಳಲ್ಲಿ ಇನ್ನೂ ಇಲಿಗಳು ಸಾಯುತ್ತಿವೆ ಒಂದೆರಡು ಕಡೆ ಮನುಷ್ಯರಿಗೂ ಸ್ಲೇಗ್ ಬೇನೆ ಬಂದ ಸುದ್ದಿಯುಂಟು

ಮಿತಿ ಪ್ರಾಬಿಬಿಷನ್ ಆಫೀಸರರವರ ಸ್ಥಳದಲ್ಲಿ ಜಿಲ್ಲಾ ಜಜ್ಜರಾಗಿ ಬಂದ ಮಿಗಿ ಕೊನ್ನಿಟಿಂಟ್ಯೆನರವರಿಗೆ ಅಹಮದನಗರಕ್ಕೆ ವರ್ಗವಾಗಿರುತ್ತವೆಂತಲೂ ಇಲ್ಲಿ ೩ ವರ್ಷಗಳ ಹಿಂದೆ ಜಜ್ಜರಾಗಿದ್ದ ರಾ! ನೋಯಿಂದವಾನ ಸಾಳಪಿಯಸರು ಈ ಜಿಲ್ಲೆಯ ಜಜ್ಜರಾಗಿ ಬರುತ್ತಾರೆಂತಲೂ ತಿಳಿಯುತ್ತದೆ.

ಜಿಲ್ಲಾಧಿಕಾರಿ ರಾ! ಬಿಬಲೇಯವರು ಜನವರಿ-ಫೆಬ್ರುವರಿ ತಿಂಗಳ ಸಂಚಾರ-ಕ್ರಮ ಈ ಕೆಳಗಿನಂತಿದೆ.- ಜನವರಿ ತಾ ೬ರಿಂದ ೧೩ ಹೊನ್ನಾವರ, ೧೪ರಿಂದ ೧೩ ಗೇರಸಪ್ಪಾ; ೧೭ರಿಂದ ೨೩ ಸಿದ್ದಾಪುರ, ೨೪ರಿಂದ ೨೬ ಬನವಾಸಿ; ೨೭ರಿಂದ ಫೆಬ್ರುವರಿ ೭ರ ವರೆಗೆ ಶಿರಸಿ, ೪ರಿಂದ ೬ ಬದನಗೋಡ; ೭ರಿಂದ ೧೨ ಮುಂಡಗೋಡ; ೧೩ರಿಂದ ೨೫ ಯಲ್ಲಾಪುರ

ಹಳಿಯಾಳ— (ತಾ. ೨೯-೧೨-೪೮) ಚಳಿ ಬಹಳ. ಊರಲ್ಲಿ ಬಚ್ಚೆ-ಕೊರತೆಯಿದೆ, ವಿಷಮಜ್ವರ, ಗೊಬ್ಬರ ಮುಂತಾದ ಬೇನೆಗಳವೆ

ಹಿಂದೆ ತಿಂಬಾಳ ಲೋಕಲ್ ಬೋರ್ಡಿನ ಅಧ್ಯಕ್ಷರೂ ನಗರ ಸಭೆಯ ಸದಸ್ಯರೂ ಆಗಿದ್ದ ರಾ! ಆನಂತ ನೋಯಿಂದಗಿ ಇವರು ಕಳೆದ ತಾ. ೨೨ಕ್ಕೆ ಸ್ವರ್ಗಸ್ಥರಾದರೆಂಬು ತಿಳಿಸಲು ವ್ಯಸನವಾಗುತ್ತದೆ

ನಗರಸಭೆಯ ಅಧ್ಯಕ್ಷರ ಸರ್ವಾಧಿಕಾರತನ ಮೇರೆದಪ್ಪಿದೆ ಇವರೊಬ್ಬರಿಲ್ಲವಾಗಿ ಜೆಂಡಿಮನ್ನು ೧೫ ದಿನಗಳ ರಜೆ ಕೊಟ್ಟಿದ್ದರು, ಅವರಿಗೆ ಅಧ್ಯಕ್ಷರು ಸ್ಪೆಂಡ ಮಾಡಿದ್ದಾರೆ ! ಮೇಲೆ ಡಿಕರಮಿಸ್ಟರಿಗೆ ಜಜಾಯಿ ಕೇಳಿದ್ದಾರೆ ! ನಗರ ಸಭೆಯ ಎಲ್ಲ ಕೆಲಸಗಳು ತಮ್ಮ ಸಮಕ್ಷ ಕೊಡಲ್ಪಡಬೇಕೆಂದೂ ಹಣದ ಬಟವಡೆ ತಮ್ಮ ಕೈಕ್ಕೆದುರಿಗೆ ಆಗ ಬೇಕೆಂದೂ ಅಧ್ಯಕ್ಷರು ಕಟ್ಟಪ್ಪಣೆ ಮಾಡಿದ್ದಾರೆ ! ಅಧ್ಯಕ್ಷರ ಈ ಹುಕುಮಿನಂದ ಉಪ ಸಮಿತಿಗಳ ಪ್ರಯೋಜನವಿಲ್ಲದಂತಾಗಿದೆ ! ನಗರ ಸಭೆಯ ಟ್ಯಾಕ್ಸ್ ಹಣದ ಶಿಲ್ಕು ಇಟ್ಟುಕೊಳ್ಳುವ ಕೆಲಸ ಕಾಮಿಡೆ-ಏಯಮಗಳಂತೆ ಬೇಧ ಅಧಿಕಾರ ರದು ! ಅದು ಇನ್ನೂ ರದ್ದಾಗಿಲ್ಲ ! ಅಧ್ಯಕ್ಷರು ಮೊನ್ನೆ

[ಪುರವಣಿ ನೋಡಿರಿ]

BHUVANENDRA PRODUCTS LTD.,
KATAPADI. S. K.

ಭುವನೇಂದ್ರ ಪಂಚರತ್ನಗಳು.

ಭುವನೇಂದ್ರ ಚ್ಯವನಪ್ರಾಶ :— ಕ್ಷಯದ ಪ್ರಥಮಾವಸ್ಥೆ, ಶ್ವಾಸಖಾಸ, ನರಗಳ ದುರ್ಬಲತೆ ಇವುಗಳಿಗೆ ಗುಣಕಾರಿ

ಭುವನೇಂದ್ರ ದಶಮೂಲಾರಿಷ್ಟ:— ಪ್ರಸವಾನಂತರ ಸ್ತ್ರೀಯರಿಗೆ ಅಮೃತಸಮಾನ ಇದು ಕಸ್ತೂರಿ ಮಿಶ್ರಿತ.

ಭುವನೇಂದ್ರ ಅಶೋಕಾರಿಷ್ಟ :— ಸ್ತ್ರೀಯರ ಸಮಸ್ತ ವ್ಯಾಧಿಗಳಿಗೂ ರಾಮಬಾಣ

ಭುವನೇಂದ್ರ ದ್ರಾಕ್ಷಾಸವ :— ಶಕ್ತಿವರ್ಧಕ, ತ್ರಾಣದಾಯಕ, ರಕ್ತವೃದ್ಧಿ ಮಾಡಿ ಆಹ್ಲಾದವನ್ನುಂಟು ಮಾಡುವದು

ಭುವನೇಂದ್ರ ಕೃಷ್ಣಾರಿಕ್ :— ಸಮಸ್ತ ಚರ್ಮವ್ಯಾಧಿಗಳಿಗೂ ಖಾತ್ರಿ ಗುಣಕಾರಿ. ಹೊಟ್ಟೆಯಲ್ಲಿಯೂ ಉಪಯೋಗಿಸುವ ದಿವ್ಯೌಷಧ.

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸಿದ ಬಗೆಬಗೆಯ ಆಸವಾರಿಷ್ಟಗಳು, ಲೇಹ್ಯಗಳು, ತೈಲಗಳು, ವಟಿ, ಮಾತ್ರೆ, ಗುಗ್ಗುಳ, ಭಸ್ಮಾದಿಕಗಳು ಸದಾ ಸಿದ್ಧವಿರುವವು.

ಪ್ರತಿನಿಧಿಗಳಿಲ್ಲದ ಕಡೆಯಲ್ಲಿ ಏಜಂಟರು ಬೇಕಾಗಿದ್ದಾರೆ. ಧಾರಾಳ ಕಮಿಶನ್, ವಿಪುಲ ಸಾಕಾರ್ಯ; ಹೆಚ್ಚಿನ ಮಾಹಿತಿಗೆ ಇಂದೇ ಬರೆಯಿರಿ

ನಮ್ಮ ಏಜಂಟರು:—

ಭಟ್ಕಳ — ವಾಮನ ಗಣಪಯ್ಯ ಶ್ಯಾನಭಾಗ, ಮರ್ಚಂಟ
ಅಂಕೋಲಾ — ವೇದಮೂರ್ತಿ ಹಸುಮಪ್ಪೆ ಕೇಶವ ಭಟ್ಟ.
ಕಾರವಾರ — ದಾಮೋದರ ನಾಗಪ್ಪ ಶ್ಯಾನಭಾಗ, ಮರ್ಚಂಟ
ಹೊನ್ನಾವರ — ಕಾಮತ ಸ್ಟೋರ್ಸ್.
ಗೋಕರ್ಣ — ಎಮ್. ವ್ಹಿ. ಬಸ್ತಿಕರ, ಮರ್ಚಂಟ
ಶಿರಸಿ — ಆರ್. ವ್ಹಿ. ಧಾತಸ್ಕಾ, ಕೆಮಿಸ್ಟ

ವಿಳಾಸ:—

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಬ್ರಾಂಚ್ ಆಫೀಸು: ಕುಮಟಾ. ಉ. ಕ. } OR { BHUVANENDRA PRODUCTS LTD. Head Office. KATAPADI, S K.

ವಾರ್ತೆಗಳು.

(೪ನೇ ಪಾನಾಂದ ಮುಂದರಿಸಿದ್ದು)

ಕುಳಿತುಕೊಂಡು, ಬ್ರಿಟಿಶರಿಂದ ಕೆಲವು ರಾಜಕೀಯ ಹಕ್ಕುಗಳು ನೊರಕುತ್ತಲೇ ಕೆಳಗಿಳಿದು ಒಂದು ತಾವೂ ಭಾರತೀಯರಂತ್ತೇವೆಂದು ಕೇಳುತ್ತ, ಸಿಕ್ಕ ರಾಜಕೀಯ ಅಧಿಕಾರಗಳನ್ನಿ ಪಾಲು ಬೇಡಲು ಮುಂದೆ ಬಂದಿದ್ದಾರೆಂದು ಅವರ ಪ್ರತಿಪಾದನೆ ರಾಷ್ಟ್ರೀಯ ಸಭೆಯು ಇದನ್ನೆರಿಯದೆ ತಪ್ಪು ತಿಳಿ ಹಿಡಿದಿರುವದೆಂದು ಅವರ ಆರೋಪ ಕೋಂಗ್ರೆಸ ಕಾರ್ಯಕಾರಿ ಮಂಡಳವು ಹಿಂದು ಮಯಾನಬೆಗೆ ಜರಿಯ ಸಂಸ್ಥೆಯೆಂದು ಸಂಬೋಧಿಸಿದ ಬಗ್ಗೆ ಬ್ಯಾ| ಸಾನರಕರರಿಗೆ ಒಲು ಸಿಟ್ಟು ಬಂದಿದೆ ರಾಷ್ಟ್ರೀಯ ಸಭೆಯು ಅಲ್ಪಸಂಖ್ಯಾತ ವಾಗುತ್ತ ನಡೆದ ದ್ದರಿಂದಲೇ ಕಾರ್ಯಕಾರಿ ಮಂಡಳವು ಮಹಾಸಭೆಗೆ ಜಾತೀಯ ಸಂಸ್ಥೆಯೆಂದು ಹೆಸರಿಡಲು ಪ್ರಯತ್ನವಾಯಿತೆಂದು ಅವರು ಹುಡಿಯುತ್ತಾರೆ ಮತ್ತು ಸಮಸ್ತ ಸಾರ್ವಜನಿಕ ಸಮಸ್ಯೆಗಳನ್ನು ಹಿಂದುತ್ವದ ದೃಷ್ಟಿಯಿಂದ ಪರಿಶೀಲಿಸಬೇಕಾಗಿಯೂ ಕಾನೂನು ಮಂಡಳ ನೊವಲಾದ ಪ್ರತಿನಿಧಿಕ ಸಂಸ್ಥಗಳೊಳಗಿನ ಹಿಂದೂ ಸ್ಥಳಗಳನ್ನು ಹಿಂದು ಮಹಾಸಭೆಯವರು ವಶಪಡಿಸಿಕೊಳ್ಳಬೇಕೆಂತಲೂ, ಮುಸಲ್ಮಾನರಿಗೆಯಾವ ವಿಷಯದಲ್ಲೂ ಪ್ರಾಶಸ್ತ್ಯ ಕೊಡದೆ ಒವರ ಮೇಲೆ ಸೂಕ್ಷ್ಮ ದೃಷ್ಟಿಯಿಡಬೇಕಾಗಿಯೂ, ರಾಷ್ಟ್ರೀಯ ಸಭೆಯು ಹಿಂದು ಸಮಾಜದ ಪ್ರತಿನಿಧಿಕ ಸಂಸ್ಥೆಯಾಗಿರುವದಿಲ್ಲವಾದ್ದರಿಂದ ಅದನ್ನು ಬಹಿಸ್ಕರಿಸಬೇಕೆಂತಲೂ, ಕೋಂಗ್ರೆಸ್ಸಿಗೆ ಮತ ಕೊಡಬಾರದೆಂತಲೂ, ಕೋಂಗ್ರೆಸ್ಸಿಗೆ ಹಾಜಿಗೆ ತರಲು ಅದೇ ಉಪಾಯ ವೆಂತಲೂ ಅವರು ಕಾರ್ಯಕ್ರಮ ಮುಂದಿಟ್ಟಿದ್ದಾರೆ ನಿಜಾಮ ಸರಕಾರವು ಹಿಂದು ಪ್ರಜೆಗಳ ಸಂಖ್ಯೆಗನುಗುಣವಾಗಿ ನ್ಯಾಯ್ಯ ಹಕ್ಕುಗಳನ್ನು ಕೊಡಲೊಪ್ಪುವ ತನಕ ಹೈದರಾಬಾದದಲ್ಲಿ ಈಗ ನಡೆದಿರುವ ಸತ್ಯಾಗ್ರಹಕ್ಕೆ ಸಕ್ರಿಯ ಸಹಾಯ ಮಾಡತಕ್ಕದ್ದೆಂದು ಮಹಾಸಭೆಯಲ್ಲಿ ಮಹತ್ವದ ನಿರ್ಣಯನಾಯಿತು ೩೦೦ ಸ್ವಯಂಸೇವಕರು ಸತ್ಯಾಗ್ರಹಕ್ಕೆ ಸಿದ್ಧರಾಗಿ ಬೇಕೆಂದು ಆದೃಷ್ಟರು ತಿಳಿಸಿದರು. ಮತ್ತು ಸತ್ಯಾಗ್ರಹ ನಿಧಿಗೆ ಸಹಾಯವೆಂದು ಶ್ರೀ| ನಾರಾಯಣರಾವ ಖರೇಯವರು ರೂ ೧೧೦ ಕೊಟ್ಟ ಸಂಗತಿಯನ್ನ ಜಾಹೀರಪಡಿಸಿದರು ಪರಭಕ್ರ ಹಿಂದುಸ್ತಾನದ ಮೇಲೆ ದಾಳ ಮಾಡಿದರೆ ದೇಶರಕ್ಷಣೆ ಮಾಡಿಕೊಳ್ಳುವ ಹೊಣೆ ಹಿಂದುಗಳ ಮೇಲೆ ಬೀಳುವದಾದ್ದರಿಂದ ದೇಶರಕ್ಷಣೆ ಸಾರ್ವಕಪ್ಪ ಸೈನ್ಯ, ವಿಮಾನ ಮತ್ತು ನೌಕಾ ದಳಗಳು ಇರಬೇಕೆಂತಲೂ, ಅಲ್ಲಲ್ಲಿ ಲಸ್ಕರ ಕಾಲೆಗಳನ್ನು ಸ್ಥಾಪಿಸಿ ೧೫ ವರ್ಷಗಳಲ್ಲಿ ಸೈನ್ಯದಲ್ಲಿ ಸಂಪೂರ್ಣ ಹಿಂದೀಕರಣ ಮಾಡಿಕರಬೇಕಾಗಿಯೂ ಇನ್ನೊಂದು ಉಪ್ಲೇಖನಶಕ್ಕ ಗೊತ್ತುವಳಿಯಾಗಿದೆ ಶಸ್ತ್ರಾಸ್ತ್ರಗಳನ್ನು ಪಂಪಲು ಯಾವತ್ಕರಿಗೂ ಪರವಾನಗಿ ಸಿಗಬೇಕಾಗಿಯೂ ಸೈನ್ಯದಲ್ಲಿ ಎಲ್ಲ ಜಾತಿ-ವರ್ಗಗಳಿಗೆ ಪ್ರವೇಶ ಸಿಗಬೇಕೆಂತಲೂ ಒಂದು ನಿರ್ಣಯವಾಗಿದೆ

— ಕಳೆದ ವಾರ ಕಲಕತ್ತೆಯಲ್ಲಿ ಶ್ರೀ| ಸತ್ಯಮೂರ್ತಿಯವರ ಅಧ್ಯಕ್ಷತೆಯಲ್ಲಿ ಅ| ಭ| ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಪರಿಷತ್ತು ಒರುಗಿತು ಶ್ರೀ| ಸತ್ಯಮೂರ್ತಿಯವರು ಪಾಸ್ತಾವಿಕ ಭಾಷಣದಲ್ಲಿ ಈಗ ಪ್ರಾಂತ ಗಳಲ್ಲಿ ಪ್ರಜಾ-ಪ್ರತಿನಿಧಿಗಳು ಅಧಿಕಾರಾರೂಢರಾಗಿ ಲೋಕಮತಾನುವರ್ತಿಯಾಗಿ ರಾಜ್ಯಭಾರ ನಡಿಸಿ ಹತ್ತಿರುವದರಿಂದ ಸ್ಥಾನಿಕ ಸ್ವರಾಜ್ಯಸಂಸ್ಥೆಗಳ ಸಂಖ್ಯೆಯನ್ನು ಕಡಿಮೆ ಮಾಡಿ ತರಬಹುದಾಗಿ ಮಹತ್ವದ ಸೂಚನೆ ಮುಂದಿಟ್ಟರು ಅನೇಕ ಸ್ವರಾಜ್ಯ ಸಂಸ್ಥೆಗಳಿದ್ದಲ್ಲಿ ಅವುಗಳೊಳಗೆ ದಕ್ಷತೆಯಿಂದ ದುಡಿಯಲಿಕ್ಕೆ ಸಾಕಷ್ಟು ಜನರು ಸಿಗಲಾರರೆಂದು ಅವರ ಜೊರು

— ಅಖಿಲ ಭಾರತ ಕ್ರಿಸ್ತೀ ಪರಿಷತ್ತು ಕಳೆದ ವಾರ ಮಂಗಳೂರಿನಲ್ಲಿ ಕೂಡಿತ್ತು ಕ್ರೈಸ್ತಿಗಳಿಗೆ ಸಮಾನ ದರ್ಜೆ ಸಿಕ್ಕಲ್ಲಿ ಅವರು ಭಾರತೀಯ ಸ್ವಾತಂತ್ರ್ಯದ ಹೋರಾಟದಲ್ಲಿ ಯಾವದೇ ಪಕ್ಷವೊಡನೆ ಸೇರಲು ಸಿದ್ಧರಿದ್ದಾರೆಂದು ಪರಿಷತ್ತಿನ ಅಧ್ಯಕ್ಷರಾದ ಶ್ರೀ| ಮೈಕರ್ಜಿಯವರು ಜಾಹೀರಪಡಿಸಿದ್ದಾರಂ. ಇದೇ ಕಾಲಕ್ಕೆ ಶ್ರೀ|| ಸೋರ್ಪರವರ ಅಧ್ಯಕ್ಷತೆಯಲ್ಲಿ ಸೇರಿದ ಅ| ಭಾ| ಕೆಥೊಲಿಕ್ ಪರಿಷತ್ತಿನಲ್ಲಿ ರಾಷ್ಟ್ರೀಯ ತತ್ವಗಳಿಗೆ ಕೆಥೊಲಿಕ್ ಸಮಾಜದ ಪೂರ್ಣ ಸಹಾನುಭೂತಿಯುಂಟೆಂದು ಸಾರಲ್ಪಟ್ಟಿತಲ್ಲದೆ, ಸಮಾಜದವರು ನಡಿಸುವ ಯಾವತ್ತೂ ಶಾಲೆಗಳಲ್ಲಿ ದೇಶ ಭಾಷೆಗಳ ಬೆಳವಣಿಗೆಯ ಕಡೆಗೆ ವಿಶೇಷ ಲಕ್ಷ ಪೂರೈಸಬೇಕೆಂದು ಗೊತ್ತಾಯಿತು.

— ಕೋಂಗ್ರೆಸ ಕಾರ್ಯಕಾರಿ ಮಂಡಳದ ಮುಂದಿನ ಸಭೆ ಇದೇ ಬರುವ ತಾ ೧೧ಕ್ಕೆ ಬಾಡೋಲಿಯಲ್ಲಿ ಕೂಡುವದು. ಹಿಂದೂ-ಮುಸಲ್ಮಾನ ಐಕ್ಯ ಸಮಸ್ಯೆಯ ಕುರಿತು ಈ ಸಭೆಯಲ್ಲಿ ಕೂಲಂಕಷ ಚರ್ಚೆಯಾಗುವದಂತೆ ಮಹಾತ್ಮರು ಆವಾಗ ಗುಜರಾತದಲ್ಲಿರುವದರಿಂದ ಕಾರ್ಯಕಾರಿ ಮಂಡಳದ ಸಭೆಗೆ ಚೈತ್ಯಸಲು ಅವರಿಗೆ ಅನುಕೂಲವಾಗಬೇಕೆಂದೇ ಮಂಡಳದ ಸಭೆ ಬಾಡೋಲಿಯಲ್ಲಿ ಕರೆಯಲಾಗಿದೆ

WANTED

An Organiser for North Kanara on Salary & Commission with head-quarters at KARWAR or KUMTA.

Experienced men need apply

To:

THE POPULAR INSURANCE CO., LTD.,

H. O. MANGALORE.

Branch
PROSPECT CHAMBERS,
Hornby Road.
Fort, BOMBAY

- ಮೂರು ವರ್ಷಗಳನ್ನು ಸಂಪೂರ್ಣ ಮದ್ಯವಾನೋ
ಚ್ಚಾಟನೆಯಾಗುವಂತೆ ನೋಡಿಕೊಳ್ಳಬೇಕೆಂದು
ಮಹಾತ್ಮಾ ಕೊಂಗ್ರೆಸ ಕಾರ್ಯಕಾರಿ ಮಂಡಳಿಯು
ಂಗ್ರೆಸ ಮಂತ್ರಿಗಳಿಗ ಸೂಚನೆ ಕೊಟ್ಟಿತ್ತಷ್ಟೆ.
ದರಂತೆ ಕೊಂಗ್ರೆಸ ಮಂತ್ರಿಮಂಡಲಗಳು ತಮ್ಮ
ಮ್ಮ ಪ್ರಾಂತದ ಹಲಕೆಲವು ಜಿಲ್ಲೆಗಳಲ್ಲಿ ಈ ಹಿಂದ
ೀ ಮದ್ಯಪಾನ ಪ್ರತಿಬಂಧ ಜಾರಿಯಲ್ಲಿ ತಂದಿವೆ
ದರೆ ಅವರೆಗಿಂದ ಪ್ರಗತಿಯಿಂದ ಮಹಾತ್ಮರಿಗೆ
ಸಮಾಧಾನವಾಗಿರುವದಿಲ್ಲ ಈಗಣ ಪ್ರಮಾಣದಿಂದ
ಪ್ರಗತಿ ಮಾಡುತ್ತ ಹೋದರೆ ಪ್ರಾಂತಗಳು ಸಂಪೂ
ರ್ಣ ನಿರ್ಮದ್ಯವಾಗಲು ಹತ್ತೆಂಟು ವರ್ಷಗಳು ತಗ
ುವವೆಂತಲೂ, ಕೊಂಗ್ರೆಸ ಮಂತ್ರಿಗಳು ಅಬಕಾರಿ
ಉತ್ಪನ್ನ ಮುಗುಸುವದೆಂಬ ಅಂಜಿಕೆಯಿಂದ ಕರ್ತವ್ಯ
ತತ್ಪರರಾಗಿಲ್ಲವೆಂತಲೂ ಮಹಾತ್ಮರು "ಹರಿಜನ"
ಪತ್ರಿಕೆಯಲ್ಲಿ ಬರೆದಿದ್ದಾರೆ ಮತ್ತು ಆ ಅಂಜಿಕೆ
ಯನ್ನು ಬಿಟ್ಟುಕೊಟ್ಟು ಪೂರ್ಣ ಮದ್ಯನಿರೋ
ಧನ ಕಾರ್ಯಕ್ರಮವನ್ನು ಕೂಡಲೇ ಕೈಕೊಳ್ಳಬೇ
ಕಾಗಿಯೂ ಮದ್ಯ-ಪ್ರತಿಬಂಧದಿಂದ ಲಾಭಗೊಂಡಿದ
ಕೂಲಿಯಾಳುಗಳ ಮೇಲೂ, ಗಿರಣಿ ಕಾರಖಾನೆಗಳ
ಒಡೆಯರ ಮೇಲೂ, ವೆತ್ತಕರ ಮೇಲೂ ಕರ ಹೇರಿ
ಕೆ ಮಾಡಬಹುದಾಗಿಯೂ ಸೂಚನೆಗಳನ್ನಿತ್ತಿದ್ದಾರೆ
ಅದರಂತೆ ಮುಂಬಯಿ ಸರಕಾರವು ಅಹಮದಾಬಾದ
ದಲ್ಲಿ ಮದ್ಯಪ್ರತಿಬಂಧ ಮಾಡಿದ್ದರಿಂದ ಒದಗಿಬಂದ
ಗ ಲಕ್ಷ ರೂಪಾಯಿಗಳ ಹಾನಿಯನ್ನು ಅಂಕಿತ
ತುಂಬಿಕೊಳ್ಳುವ ಒಗ್ಗೆ ವರ್ತಕರ ಮೇಲೆ "ಸೇಲ್ಸ
ಟೆಕ್ಸ್" ಯಾನೆ "ಮಾರಾಟಗಳ ಮೇಲಿನ ತೆರಿ"ಹೇರು
ವ ಸಂಕಲ್ಪ ಮಾಡಿದೆ ವರ್ತಕರು ಸ್ವಸಂತೋಷ
ದಿಂದ ಹಣ ಕೊಡದಿದ್ದರೆ ಕಾನೂನು ಮಾಡಿ ಕರ ಹೇರಿ
ಕೆ ಮಾಡಲಾಗುವದಂತ ಕೂಲಿಕಾರರಿಂದಲೂ ಕಲೆ
ಯೊಂದಕ್ಕೆ ೪-೮ ಆಣೆಗಳಂತೆ ವಂತಿಗೆ ವಸೂಲ
ಮಾಡಲ್ಪಡುವದು ಮದ್ಯಪ್ರತಿಬಂಧದಿಂದ ಆಯಾ
ಜನರಿಗೆ ಉಳಿತಾಯವಾಗುವ ಹಣದ ೧/೨ ದಷ್ಟು ಹಣ
ಸರಕಾರಕ್ಕೆ ಸಲ್ಲಿಸಬೇಕೆಂದು ಸರಕಾರದ ಬೇಡಿಕೆ.

— ಕೆಳದ ವಾರ ಭೂಜದಲ್ಲಿ ಮುಂಬಯಿಯ ತರುಣರ
ಮುಂದಾಳುಗಳಾದ ಶ್ರೀ|| ಯುಸುಫ ಮೆಹೆರ ಅಲಿ
ಯವರ ಅಧ್ಯಕ್ಷತೆಯಲ್ಲಿ ಕಚ್ಛ ಪ್ರಾಂತದ ಪ್ರಜಾಪರಿ
ನತ್ತು ಸೇರಿತ್ತು. ಕಚ್ಛದ ಮಹಾರಾಣಾರವರು ಮೂರು
ತಿಂಗಳುಗಳೊಳಗೆ ತಮ್ಮ ರಾಜ್ಯದಲ್ಲಿ ಪ್ರಜಾಪ್ರಭುತ್ವ
ದ ರಾಜ್ಯಪದ್ಧತಿ ಅಮಲಿನಲ್ಲಿ ತರಬೇಕಾಗಿಯೂ
ಇಲ್ಲದಿದ್ದರೆ ಪ್ರಜಾಪರಿನತ್ತು ಸತ್ಯಾಗ್ರಹ ಹೂಡಬೇಕಾ
ದೀತೆಂತಲೂ ಪರಪತ್ರನಲ್ಲಿ ಮಂತ್ರಾಗ್ರತೆಯ ಮಹ
ತ್ವದ ಗೊತ್ತುವಳಿ ಕೈಕೊಳ್ಳಲ್ಪಟ್ಟಿತು

— ಭಾವನಗರದ ಮಹಾರಾಜರು ತನ್ನ ಸಂಸ್ಥಾನ
ದಲ್ಲಿ ಪ್ರಜೆಗಳಿಗೆ ಹೊಣೆಗಾರ ರಾಜ್ಯಪದ್ಧತಿ ಕೊಡಲು
ಕಾಮಾಗಿ ಒಪ್ಪಿದ್ದಾರೆ ಮಹಾತ್ಮರು ಈ ತಿಂಗಳಲ್ಲಿ
ಬಾಡೋರ್ಲಿಗೆ ಹೋದಾಗ ಅವರ ಸಲಹೆ ತಕ್ಕೊಂಡು
ಭಾವೀ ರಾಜ್ಯಘಟನೆಯ ರೂಪರೇಷೆ ನಿಶ್ಚಯಿಸಲಾ
ಗುವದೆಂದು ಜಾಹೀರ ಮಾಡಿದ್ದಾರೆ. ಸಂಸ್ಥಾನದ
ದಿವಾಣಾದ ಶ್ರೀ|| ಆನಂತರಾಯ ಪಟ್ಟಣಿಯವರು
ಆಗಾಗಲೇ ಮಹಾತ್ಮರ ಹಾಗೂ ಸರದಾರ ವಲ್ಲಭ
ಭಾಯಿಯವರ ಕೂಡ ಪತ್ರವ್ಯವಹಾರ ನಡಿಸಿದ್ದಾರೆ.
ಇತ್ತ ಕರ್ನಾಟಕದಲ್ಲಿ ರಾಮದ ರ್ಗ ಸಂಸ್ಥಾನಾಧಿ
ಪತಿಗಳೂ ಪ್ರಜೆಗಳಿಗ ಹೊಣೆಗಾರವಿರುವ ರಾಜ್ಯಪ
ದ್ಧತಿಯನ್ನು ಸ್ಥಾಪಿಸುವದೇ ತಮ್ಮ ಧ್ಯೇಯವೆಂದು
ಜಾಹೀರ ಮಾಡಿದ್ದಾರೆ ಕೂಡಲೇ ಸಂಸ್ಥಾನದ
ರಾಜ್ಯದಾಡಳತದಲ್ಲಿ ಆ ದೃಷ್ಟಿಯಿಂದ ಹಲವು ಸುಧಾ
ರಣೆಗಳಾಗಲಿರಿಕ್ಕಿವೆ, ಲೋಕನಿಯುಕ್ತ ಸದಸ್ಯರೊಬ್ಬ
ರಿಗೆ ನುಂತ್ರಿಸದವೂ ಕೊಡ್ಲ್ಪಡುವದು.

— ರಾಜಕೋಟದ ದಿವಾಣಾದ ಸರ್ ಪಟ್ಟಿಕ್
ಕೆಡೆಲ್ರವರಿಗೆ ಮನೆಗೆ ಹೋಗಲು ಅಶ್ವಕೆಕೊಟ್ಟಂತೆ
ಯೇ ರಾಕೂರ ಸುಹೆಬರು ಅವರಿಗೊಂದು ಪತ್ರ
ಬರೆದು, ಅವರ ನೇಸುಣಾಕಿಗೆ ತಮ್ಮ ಪ್ರಜೆಗಳು
ವಿರುದ್ಧರಿದ್ದಾರೆಂತ ತಿಳಿದಿದ್ದಲ್ಲದೆ, ಸರ್ ಪೆಟ್ರಿಕ್
ರವರ ಅವಶಿಷ್ಟ ಅವಧಿಯ ಪಗಾರಿನ ಮತ್ತು ವಿಮಾ
ನಪ್ರಯಾಣ ಇಂಗ್ಲಂಡಕ್ಕೆ ಹೋಗುವ ಖರ್ಚಿನ ಹಣಕ್ಕೆ
ಹಂಡಿಯನ್ನು ಸಹ ಕಲಿಸಿಕೊಟ್ಟಿದ್ದಾರೆಂದು ವಾರ್ತೆ
ಯಾಂಟಿ ಶ್ರೀ|| ಮಾಣಿಕಲಾಲ ಪಟೇಲರವರು
ಹೊಸ ದಿವಾಣರಾಗುವರೆಂಕಲೂ ವಾರ್ತೆಯಾಂಟು

— ಮುಂಬಯಿಯೊಳಗೆ ಸರದಾರ ವಲ್ಲಭಭಾಯಿ
ಪಟೇಲರು ತಾ ೨೮ನೇ ದಿನ ಆಯ್ದು ಮೈದಾನಿನಲ್ಲಿ
೫೦೦೦೦ ಜನಸಮುದಾಯದ ಮುಂದೆ ಹಿಂದೀ
ಸಂಸ್ಥಾನಿಕರನ್ನು ದ್ವೇಷಿಸಿ ಭಾಷಣ ಮಾಡಿದರು
ರಾಜಕೋಟ ಸಂಸ್ಥಾನ ಮಾತ್ರವೂ ಬೇರೆ ಸಂಸ್ಥಾನ
ಗಳಲ್ಲಿಯೂ ಸದ್ಯಕ್ಕೆ ಪ್ರಜೆಗಳು ಕೈಕೊಂಡ ಸತ್ಯಾ
ಗ್ರಹವು ಕೊಂಗ್ರೆಸ ವಾತಾವರಣದಪರಿಣಾಮವಾಗಿದ್ದು
ಸಂಸ್ಥಾನಿಕರು ಮಹಾತ್ಮಾ ಗಾಂಧಿಯವರ ಅಪಪೇಕ್ಷ
ದಂತೆ ತಮ್ಮ ಘೋರಣದಲ್ಲಿ ಸಮುಯೋಚಿತ ಬದಲಾ
ವಣೆ ಮಾಡಿಕೊಂಡು ಪ್ರಜೆಗಳ ಪ್ರೀತಿಯನ್ನು ಸಂಪಾ
ದಿಸಬೇಕೆಂದು ಅವರ ಧಾಪಣದ ಇತ್ಯರ್ಥವಿತ್ತು.
ರಾಜಕೋಟ ಸತ್ಯಾಗ್ರಹದಿಂದ ಬಿಡುಗಡೆ ಹೊಂದಿ
ಬಂದ ಶ್ರೀಮತಿ ಮಣಿಬೇನ ಪಟೇಲ, ಮೃದುಲಾಬೇನ
ಸಾರಾಭಾಯಿ,ಶ್ರೀ| ಭಡಕಮಕರ ಮುಂತಾದ ಪ್ರತಿ
ನಿಧಿಗಳು ಸರದಾರರೊಡನೆ ಸಭೆಗೆ ಹಾಜರಿದ್ದರು
ಮುಂಬಯಿ ನಗರದೊಳಗಿನ ಶ್ರೀ| ಭುಲಾಭಾಯಿ
ದೇಸಾಯಿ, ಗೋವಿಂದಜಾಲ ಶಿವಲಾಲ, ಎಸ್ ಎ
ಬ್ರೆಲ್ವಿ, ಮುಂತಾದ ಅಡ್ವೋಕರು ಸರದಾರರಿಗೆ ಹೊಮಾ
ಲೆಗಳನ್ನು ಹಾಕಿ ಸತ್ಕರಿಸಿದ ಮೇಲೆ ಸರದಾರರು
ಅಂದದ್ದೇನಂದರೆ — ಮಹಾತ್ಮಾ ಗಾಂಧಿಯವರು
ಸಂಸ್ಥಾನದೊಳಗಿನ ಪ್ರಜೆಗಳ ಚಳವಳಿಯಲ್ಲಿ ಏನೂ
ಲಕ್ಷ್ಯಕೊಡುವದಿಲ್ಲೆಂದು ಸಂಸ್ಥಾನದೊಳಗಿನ ಕೊಂಗ್ರೆ
ಸ ಕಾರ್ಯಕರ್ತರು ತಿಳಕೊಂಡಿದ್ದರು. ಕೊಂಗ್ರೆಸ್ಸು
ಸತ್ಯಾಗ್ರಹ ಚಳವಳಿಯನ್ನು ಸಂಸ್ಥಾನಗಳಲ್ಲಿ ನಡಿ
ಸಲು ಪ್ರೋತ್ಸಾಹಿಸುವದಿಲ್ಲವೆಂದು ಕಡುಬೇಸಿಯಾಗಿ
ಕೊಂಗ್ರೆಸಿಗೆ ಜನರು ಹೀಯಾಳಿಸುತ್ತಿದ್ದರು ಸತ್ಯಾಗ್ರ
ಹ ಚಳವಳಿ ವೈಯಕ್ತಿಪ್ರೇರಣೆಯಿಂದ ಉಂಟಾಗುತ್ತದೆಂ
ದು ಅಂಥವರು ತಿಳಿದಿರಬೇಕು ಸತ್ಯಾಗ್ರಹಕ್ಕೆಹೋಗು
ವ ಜನರಿಗೆ ಒಂದೆರಡು ದಿನ ಪೂರ್ವದಲ್ಲಿ ಸತ್ಯಾಗ್ರಹ
ದ ಸಿದ್ಧತೆಯಿರುವದೇನೆಂದು ಕೇಳಿದರೆ ಅವರು ಒಪ್ಪಿ
ಗೆಕೊಡುವದಿಲ್ಲ. ಯಾಕೆಂದರೆ ಸತ್ಯಾಗ್ರಹವು ಅಂತಃ
ಕರಣ ಪ್ರೇರಣೆಯಿಂದ ಹುಟ್ಟುವ ಬದಲಾವಣೆಯಾ
ಗಿದೆ. ರಾಜಕೋಟ ಸತ್ಯಾಗ್ರಹದಲ್ಲಿಯೂ ಇದೇ
ಸಿದ್ಧಾಂತವು ಕಂಡು ಬಂತು ದೇವರ ಪ್ರೇರಣೆಯಿಂದ
ಲೇ ಸತ್ಯಾಗ್ರಹಕ್ಕಾಗಿ ಜವತೆಯು ಸಿದ್ಧವಾಯಿತು
ರಾಜಕೋಟ ಸತ್ಯಾಗ್ರಹದಲ್ಲಿ ಸಂಪೂರ್ಣ ಯಶಸ್ಸು
ಸಿಗುವದೆಂಬ ನಿಜವಾದ ವಿಶ್ವಾಸವು ನನಗೆ ತುಂಬಾ
ಇತ್ತು ನಾನಾಗಲಿ, ಕೊಂಗ್ರೆಸ್ಸಾಗಲಿ ಸಂಸ್ಥಾನಿಕರ
ವೈರಿಗಳಲ್ಲ ಮಹಾತ್ಮಾ ಗಾಂಧಿಗಳು ಸಂಸ್ಥಾನಿಕರ
ನಿಜವಾದ ಗೆಳೆಯರೆಂಬದನ್ನು ಅವರು ತಿಳಿದಿರಲಿಕ್ಕೆ
ಬೇಕು. ಬದಲುವ ಕಾಲಮಾನದಂತೆ ಅವರು ಪರಿ
ಸ್ಥಿತಿಯನ್ನು ಸುಧಾರಿಸಿಕೊಳ್ಳಬೇಕು. ಹೀಗೆ ಅವರು
ನಡಕೊಳ್ಳದಿದ್ದರೆ, ಮಿತ್ರತ್ವದ ಸಲಹೆಯನ್ನು
ಬದಿಗೊತ್ತಿದರೆ ಸಂಸ್ಥಾನಿಕರು ತಮ್ಮನ್ನು ತಾವೇ
ಗಂಡಾಂತರದಲ್ಲಿ ಹಾಕಿಕೊಂಡಂತಾಗುವದು ರಾಜ
ಕೋಟವಂತೂ ಮಹಾತ್ಮರ ಜನ್ಮಸ್ಥಾನವೆಷ್ಟೇ ಅಲ್ಲ,
ಮಹಾತ್ಮರ ತಂದೆಯವರು ಅಲ್ಲಿ ಹಲವು ವರ್ಷಗಳ
ವರೆಗೆ ದಿವಾಣರಾಗಿದ್ದರು ಮಹಾತ್ಮರ ಅನುಯಾ
ಯಿಯಾಗುನೆವಾಗಿ ರಾಜಕೋಟ ರಾಕೂರರು ಹಿಂದೆ
ಯೇ ಘೋಷಿಸಿದ್ದರು ಕೆಲವು ವರ್ಷಗಳಿಂದ ಸಂಸ್ಥಾ
ನದ ಕಾರಭಾರವು ಪ್ರಜೆಗಳಿಗೆ ಸಮ್ಮತವಾಗಿರಲ್ಲಿ
ಜನರ ಉತ್ಸಾಹ ಸದಿಡಿಯಲು ನಡಿಸಿದ
ವಿವಿಧ ಉಪಾಯಗಳು ರಾಕೂರ ಸಾಹೇಬರಿಗೆ
ಸೇರುವದಿಲ್ಲ ರಾಕೂರರೆ ಅಜ್ಜೆಯೆಂದು ಸಾರ್ವ
ಭೌಮ ಸರಕಾರವು ಪ್ರಜೆಗಳ ಉತ್ಸಾಹವೆಮ್ಮ ಕುಗ್ಗಿ
ಸಲು ಯತ್ನಿಸಿತು. ರಾಜಸತ್ತೆಯು ಸನಾತನ ಸಂಸ್ಥೆ
ಯೆಂದು ಮೆದವು ಹೇಳುತ್ತದಾಗಿ ರಾಜಕೋಟದ
ದಿವಾಣರು ಜಾಹೀರನಾಮೆಯನ್ನು ಹೊರಡಿಸ್ದ್ದರು!
ಹಿಂದೀಯರಿಗೆ ತಮ್ಮ ಅರಸನ ವಿಷಯಕ ಕರ್ತವ್ಯವ
ನ್ನು ಉಪದೇಶಿಸಲು ಬಳೆ ಮನುಷ್ಯ ಬೇಕಾ
ಗಿಲ್ಲ! ರಾಜಕೋಟದ ಜನರು ಈ ಸತ್ಯಾಗ್ರಹದಲ್ಲಿ
ಶಿಸ್ತು ಮತ್ತು ಏಕ್ಯತನ್ನು ಅಪ್ರತಿಮವಾಗಿ ತೋರಿಸಿ
ದರು. ಅಹಿಂಸೆ-ಸತ್ಯಗಳ ಮೇಲೆಯೇ ಅವರ ಸತ್ಯಾ
ಗ್ರಹವು ಅವಲಂಬಿಸಿದೆ ನೆರೆಹೊರೆಯ ಸಂಸ್ಥಾನಿಕರು
ರಾಜಕೋಟ ಸತ್ಯಾಗ್ರಹದಿಂದ ದಿಗಿಲುಬಿದ್ದಿದ್ದಾರೆ!
ತಮ್ಮ ಸಂಸ್ಥಾನದಲ್ಲೂ ಎದ್ದೇಳಬಹುದಾದ ಚಳ
ವಳಿಯ ಬಗ್ಗೆ ಏನು ಉಪಾಯಯೋಜನೆ ಮಾಡಬೇ
